ಒಳ ಪುಟಗಳಲ್ಲಿ...

ರಾಷ್ಟ್ರದ್ರೋಹ ಮೇ ದಿನ

ಹುತಾತ್ಮರ ಸ್ಮರಣೆ 2

ಬರವಣಿಗೆಗಾರರು

ಅರಿಯರು 3

ವಿಮೋಚನಾ ಹೋರಾಟದ ಕೃತಿಗಳು

ಹೊಸ ಮಿಸ್ 4

ಬೆಲೆಯೇರಿಕೆಯ ಹೊರೆ 5

ಬಂಡವಾಳಶಾಹಿ ಭೂಮಾಲೀಕರನ್ನು

ಎದುರಿಸಿ.. 6

ಚೀನಾ ವಿರುದ್ಧ ರೇಡಿಯೋ ಯುದ್ಧ 7

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ವಾರಪತ್ರಿಕೆ

ಸಂಪುಟ ೧೨ ಸಂಚಿಕೆ ೧೯ ಮೇ ೧೩, ೧೯೯೦ ರೂ. ೧.೫೦

'ಪ್ರತ್ಯೇಕತಾವಾದಿ ಪಿತೂರಿಗಳನ್ನು ಕಿತ್ತೆಸೆಯಿರಿ'

ಕಾಶ್ಮೀರಿ ಜನತೆಗೆ ಪೊಲಿಟ್‌ಬ್ಯೂರೋ ಕರೆ

ಕಾಶ್ಮೀರಿ ಕಣಿವೆಯಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ಪಾಕಿಸ್ತಾನೀ ಆಳರಸರು ಯುದ್ಧೋನ್ಮಾದ ಸೃಷ್ಟಿಸುತ್ತಿದ್ದಾರೆ. ಬಂಡುಕೋರರಿಗೆ ಬಹಿರಂಗ ತರಬೇತಿ ನೀಡುತ್ತಿದ್ದಾರೆ. ಕಾಶ್ಮೀರದ ಇತಿಹಾಸದಲ್ಲಿ ಮೊತ್ತಮೊದಲಬಾರಿಗೆ ಹಿಂದೂ, ಸಿಖ್ ಅಲ್ಪಸಂಖ್ಯಾತರು ಕಣಿವೆ ಬಿಟ್ಟೋಡಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ ಎಂದು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಆತಂಕ ವ್ಯಕ್ತಪಡಿಸಿದೆ. ೩೭೦ ನೇ ಕಲಮನ್ನು ರದ್ದುಪಡಿಸಬೇಕೆಂದು ಮತ್ತೆ ಮತ್ತೆ ಒತ್ತಾಯಿಸುತ್ತಿರುವ, ಯುದ್ಧೋನ್ಮಾದ ಎಬ್ಬಿಸುತ್ತಿರುವ ಪಾಕಿಸ್ತಾನೀ ಆಳರಸರ ಸಂಕುಚಿತ ದೃಷ್ಟಿಯ ಪ್ರಯತ್ನಗಳಿಗೆ ಇಲ್ಲೂ ಪ್ರತಿಧ್ವನಿ ನೀಡುತ್ತಿರುವ ಬಿ.ಜೆ.ಪಿ.ಯ ನಿಲುವನ್ನು ಪಿ.ಬಿ. ತೀಕ್ಷ್ಣವಾಗಿ, ಖಂಡಿಸಿದೆ. ಕೆಲವು ವಲಯಗಳಲ್ಲಿ ಈಗ ಸೂಚಿಸಲ್ಪಡುತ್ತಿರುವ ಎರಡು ದೇಶಗಳ ಒಕ್ಕೂಟದ ಯೋಜನೆ ಅಮೇರಿಕನ್ ಸಾಮ್ರಾಜ್ಯಶಾಹಿಯ ಹಳೆಯ ಸೂತ್ರದ ಪುನರಾವರ್ತವಷ್ಟೆ ಎಂದೂ ಪಿ.ಬಿ. ಟೀಕಿಸಿದೆ.

ಏಪ್ರಿಲ್ ೨೭ ರಿಂದ ೨೯-ರವರೆಗೆ ಸಭೆ ಸೇರಿದ ಪೊಲಿಟ್‌ಬ್ಯೂರೋ ನಂತರ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಈ ಅಂಶವ್ಯಕ್ತವಾಗಿದೆ. ಪಿ.ಬಿ. ಈ ಸಭೆಯಲ್ಲಿ ದೇಶದಲ್ಲಿನ ರಾಜಕೀಯ ಪರಿಸ್ಥಿತಿಯ ಪರಾಮರ್ಶೆ ನಡೆಸಿತು. ವಿಶೇಷವಾಗಿ ಎರಡು ಅಂಶಗಳ ಹಿನ್ನೆಲೆಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಪ್ರತ್ಯೇಕತಾವಾದಿ, ಕೋಮುವಾದಿ ಶಕ್ತಿಗಳ ತೀವ್ರ ಚಟುವಟಿಕೆಗಳು ರಾಷ್ಟ್ರೀಯ ಐಕ್ಯತೆಗೆ ಒಡ್ಡಿರುವ ಹೆಚ್ಚುತ್ತಿರುವ ಸವಾಲನ್ನು ಸಭೆ ವಿಮರ್ಶಿಸಿತು. ದೇಶದ ಆರ್ಥಿಕ ಸ್ಥಿತಿಯನ್ನೂ ಇದರಿಂದಾಗಿ ಜನತೆಯು ಸಮಸ್ಯೆಗಳ ಬಗ್ಗೆಯೂ ಪಿ.ಬಿ. ಚರ್ಚಿಸಿತು.

ಕಾಶ್ಮೀರ ಸ್ಥಿತಿಯ ಬಗ್ಗೆ ವಿಮರ್ಶೆ ಮುಂದುವರೆಸುತ್ತಾ ಪಿ.ಬಿ. ಹೇಳಿಕೆ ಭಯೋತ್ಪಾದಕತೆಯನ್ನು ಪಾಕಿಸ್ತಾನೀ ತರಬೇತಿ ಪಡೆದ ಉಗ್ರಗಾಮಿಗಳ ಅಸ್ಥಿರಗೊಳಿಸುವ ಚಟುವಟಿಕೆಗಳನ್ನು ಹತ್ತಿಕ್ಕಲು ಭಾರತ ಸರ್ಕಾರ ಕೈಗೊಂಡ ಕ್ರಮಗಳನ್ನು ಸ್ವಾಗತಿಸಿದೆ. ಆದರೆ ಇವಿಷ್ಟೇ ಸಾಲದು. ಸೂಕ್ತ ರಾಜಕೀಯ ಹೆಜ್ಜೆಗಳನ್ನಿಡಬೇಕು, ನಿರುದ್ಯೋಗ ತಗ್ಗಿಸಲು, ಆರ್ಥಿಕ ಬೆಳವಣಿಗೆಗೆ ಪ್ರೋತ್ಸಾಹ ನೀಡಲು ತಕ್ಷಣ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಪಿ.ಬಿ. ತಿಳಿಸಿದೆ. ಹಿಂದೆ ನಿರ್ಣಾಯಕ ತಿರುವುಗಳಲ್ಲಿ ಮಾಡಿದಂತೆ ತಮ್ಮ ನ್ಯಾಯಪೂರ್ಣ ಬೇಡಿಕೆಗಳಿಗಾಗಿ ಹೋರಾಡುತ್ತಲೇ ಪ್ರತ್ಯೇಕಾವಾದಿ ಪಿತೂರಿಗಳನ್ನು ಕಿತ್ತೆಸೆಯಿರಿ, ಖಂಡಿಸಿರಿ ಎಂದು ಪೊಲಿಟ್‌ಬ್ಯೂರೋ ಕಾಶ್ಮೀರ ಜನತೆಗೆ ಕರೆ ನೀಡಿದೆ.

ಪಂಜಾಬ್: ಶಾಂತಿ ನೆಲೆಗೊಳ್ಳಬೇಕು

ಪಂಜಾಬಿನಲ್ಲಿ ಉಗ್ರಗಾಮಿಗಳು ಜನರಿಂದ ಹೆಚ್ಚೆಚ್ಚು ಪ್ರಮಾಣದಲ್ಲಿ ಹಣ ಕಿತ್ತುಕೊಳ್ಳುತ್ತಿದ್ದಾರೆ. ಹೀಗೆ ಸೂರೆ ಮಾಡಿದ ಹಣವನ್ನು ಕೆಲವು ಹಣಕಾಸು ಕಂಪೆನಿಗಳ ಮೂಲಕ 'ಸ್ವಚ್ಛ' ಗೊಳಿಸಲಾಗುತ್ತಿದೆ ಎಂದು ಗಮನಿಸಿದ ಪೊಲಿಟ್‌ಬ್ಯೂರೋ ಆಡಳಿತದಲ್ಲಿನ ಒಂದು ವಿಭಾಗ ಇಂತಹ ಭ್ರಷ್ಟ ಚಟುವಟಿಕೆಗಳಲ್ಲಿ ಪಟ್ಟಭದ್ರ ಹಿತಾಸಕ್ತಿ ಬೆಳೆಸಿಕೊಂಡಿದೆ ಎಂದು ಸಾಮಾನ್ಯಸ್ಥಿತಿ ನಿರ್ಮಿಸಲು ತನ್ಮೂಲಕ ಮುಕ್ತ ವಾತಾವರಣದಲ್ಲಿ ಚುನಾವಣೆಗಳು ನಡೆಯುವಂತೆ ಮಾಡಲು ನೆರವಾಗಬೇಕೆಂದು ವಿಭಿನ್ನ ಅಕಾಲಿಗುಂಪುಗಳನ್ನು ಪಿ.ಬಿ. ವಿನಂತಿಸಿದೆ.

ಪಂಜಾಬಿನ ಅಭಿವೃದ್ಧಿಗೆ ಕೆಲವು ಆರ್ಥಿಕ ಕ್ರಮಗಳನ್ನು ಕೇಂದ್ರಸರ್ಕಾರ ಆರಂಭಿಸಬೇಕೆಂದು ಪಿ.ಬಿ. ಅಭಿಪ್ರಾಯ ಪಟ್ಟಿತು. ಪೋಲಿಸ್ ಪಡೆಗಳು ಹಾಗೂ ಆಡಳಿತದ ಒಂದು ವಿಭಾಗದ ದುರಾಚರಣೆಗಳ ಮೇಲೆ ನಿಗಾ ಇಡಲು ರಾಜ್ಯ

ಪುಟ ೮ ಕ್ಕೆ

ಮೇ ೧೬; ಬೆಲೆಯೇರಿಕೆ ವಿರೋಧಿ ದಿನ

ಸಿ.ಪಿ.ಐ.(ಎಂ), ಸಿ.ಪಿ.ಐ. ಜಂಟಿ ಕರೆ

ಬಸ್ ದರ ಏರಿಕೆ ವಿರುದ್ಧ ವ್ಯಾಪಕ ಹೋರಾಟ

ಸಕ್ಕರೆ, ಎಣ್ಣೆ, ಸಿಮೆಂಟ್, ಚಹಾ ಮತ್ತಿತರ ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆ ದೇಶದಲ್ಲಿ ಅಸಹನೀಯ ಸ್ಥಿತಿ ಸೃಷ್ಟಿಸಿದೆ. ರೈಲ್ವೇ ಸಾಗಣೆ ಹಾಗೂ ಪ್ರಯಾಣ ದರ ಏರಿಕೆ, ಅಂಚೆ, ತಂತಿ, ದೂರವಾಣಿ, ದರ ಏರಿಕೆ, ಗೋಧಿ ಬೆಲೆಯೇರಿಕೆ ಇವೆಲ್ಲಾ ಒಟ್ಟಾರೆ ಬೆಲೆಗಳನ್ನು ಮತ್ತಷ್ಟು ಹೆಚ್ಚಿಸಲಿವೆ. ರಾಷ್ಟ್ರೀಯ ರಂಗ ಸರ್ಕಾರದ ಮುಂಗಡಪತ್ರದ ವಿವಿಧ ಅಂಶಗಳಿಂದಾಗಿ ಈ ದುರದೃಷ್ಟಕರ ಹಣದುಬ್ಬರ ಪ್ರವೃತ್ತಿ ಕಾಣುವಂತಿದೆ ಎಂದು ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ.ನ ಕರ್ನಾಟಕ ರಾಜ್ಯ ಮುಖಂಡರು ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.


ಜನಸಾಮಾನ್ಯರ ಹಿತಾಸಕ್ತಿಗಳನ್ನು ಕಡೆಗಣಿಸಿದ ಭಾರತ ಸರ್ಕಾರದ ಈ ಕ್ರಮಗಳನ್ನು ಖಂಡಿಸಿರುವ ಈ ಹೇಳಿಕೆ ರೈಲ್ವೇ, ಅಂಚೆ, ತಂತಿ, ಪೆಟ್ರೋಲ್, ಡೀಸಲ್ ಬೆಲೆಯೇರಿಕೆಗಳನ್ನು ವಾಪಸು ಪಡೆದು ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆ ನಿಲ್ಲಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ಈ ವಿಪರೀತ ಬೆಲೆಯೇರಿಕೆಯ ಹಿನ್ನೆಲೆಯಲ್ಲಿ ಮೇ ೧೬ ರಂದು ದೇಶದ ಎಡಪಕ್ಷಗಳು 'ಬೆಲೆಯೇರಿಕೆ ವಿರೋಧಿ ದಿನಾಚರಣೆ' ನಡೆಸಲು ನಿರ್ಧರಿಸಿದ್ದಾರೆ. ರಾಜ್ಯದಲ್ಲೂ ಸಾರ್ವಜನಿಕ ಸಭೆಗಳು, ಮೆರವಣಿಗೆಗಳ ಮೂಲಕ ಈ ದಿನವನ್ನು ಬೃಹತ್ ಪ್ರಮಾಣದಲ್ಲಿ ಸಮರಧೀರತೆಯಿಂದ ಆಚರಿಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯಸೆಕ್ರೆಟಾರಿಯೆಟ್ ಸದಸ್ಯ ಕಾಂ. ವಿ.ಜೆ.ಕೆ.ನಾಯರ್ ಹಾಗೂ ಸಿ.ಪಿ.ಐ. ರಾಜ್ಯ ಮಂಡಳಿ ಸದಸ್ಯ ಕಾಂ.ಎಂ.ಎಸ್. ಕೃಷ್ಣನ್ ಎರಡೂ ಪಕ್ಷಗಳ ಎಲ್ಲಾ ಘಟಕಗಳಿಗೆ ಕರೆ ನೀಡಿದ್ದಾರೆ. ಎಡಪಕ್ಷಗಳ ಈ ಕರೆಯನ್ನು ಬೆಂಬಲಿಸಬೇಕೆಂದು ರಾಜ್ಯದ ಜನತೆಯನ್ನು ವಿನಂತಿಸಿ ಕೊಂಡಿದ್ದಾರೆ.

ಬಸ್ ದರ ಏರಿಕೆ ಖಂಡನೆ

ವೀರೇಂದ್ರ ಪಾಟೀಲ್ ಸರ್ಕಾರ ಕೆ.ಎಸ್.ಆರ್.ಟಿ.ಸಿ., ಬಿ.ಟಿ.ಎಸ್. ಬಸ್ ದರಗಳನ್ನು ತೀವ್ರವಾಗಿ ಏರಿಸಿರುವುದರ ಬಗ್ಗೆ ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ. ತೀವ್ರ ಆತಂಕ ವ್ಯಕ್ತಪಡಿಸಿವೆ. ಈ ಅನಗತ್ಯ ಏರಿಕೆಯನ್ನು ಬಲವಾಗಿ ಖಂಡಿಸುತ್ತಾ ತಕ್ಷಣ ಅದನ್ನು ವಾಪಾಸು ಪಡೆಯಬೇಕೆಂದು ಒತ್ತಾಯಿಸಿವೆ. ಈ ಬಗ್ಗೆ ಜಂಟಿ ಕಾರ್ಯಾಚರಣೆ ನಡೆಸಲು ಮತ್ತು ಇತರ ಪಕ್ಷಗಳು, ಸಂಘಟನೆಗಳೊಡಗೂಡಿ ರಾಜ್ಯವ್ಯಾಪಿ ಬಂದ್ ನಡೆಸುವ ಸಾಧ್ಯತೆಗಳನ್ನು ಪರಿಶೀಲಿಸಲು ನಿರ್ಧರಿಸಲಾಗಿದೆ.

(ಪುಟ ೫ ನೋಡಿ)



ಜೂನ್ 4 ರಿಂದ ಸಾಲಮನ್ನಾ ಕನಿಷ್ಠ ಕೂಲಿಗಾಗಿ 50 ಸಾವಿರ ರೈತರ, ಕೃಷಿ ಕಾರ್ಮಿಕರ, ಅಸಂಘಟಿತ ಕಾರ್ಮಿಕರ ರಾಜ್ಯವ್ಯಾಪಿ ಪಿಕೆಟಿಂಗ್

ಸಿ.ಪಿ.ಐ(ಎಂ) ರಾಜ್ಯ ಸಮಿತಿ ಕರೆ

ರಾಜ್ಯಾದ್ಯಂತ ಸಂಭ್ರಮದ ಮೇ ದಿನ ಶತಮಾನೋತ್ಸವ



ಮೇ 1 ಕಾರ್ಮಿಕರಿಗೆ ಒಂದು ಚಾರಿತ್ರಿಕ ದಿನ. ಈ ಬಾರಿಯ ಮೇ ದಿನಕ್ಕೆ ಇನ್ನೂ ಹೆಚ್ಚಿನ ಮಹತ್ವವಿತ್ತು. ಏಕೆಂದರೆ ಇದು ಅಂತರಾಷ್ಟ್ರೀಯ ಮಟ್ಟದಲ್ಲಿ ಮೇ ದಿನಾಚರಣೆಯ ಶತಮಾನೋತ್ಸವದ ದಿನವೂ ಆಗಿತ್ತು. ಸರಿಯಾಗಿ ಒಂದು ಶತಮಾನದ ಹಿಂದೆ ವಿಶ್ವದ ಹಲವೆಡೆ ಮೊದಲ ಬಾರಿಗೆ ಏಕಕಾಲದಲ್ಲಿ ಕಾರ್ಮಿಕರು ಬೀದಿಗಿಳಿದು ತಮ್ಮ ವರ್ಗದ ಅಂತರಾಷ್ಟ್ರೀಯ ಸೌಹಾರ್ದತೆ ವ್ಯಕ್ತಪಡಿಸಿದರು.

ಸಾಮ್ರಾಜ್ಯಶಾಹಿಗಳು ಸಮಾಜವಾದದ ಮೇಲೆ ತೀವ್ರ ದಾಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಸಿ.ಐ.ಟಿ.ಯು. ಈ ಶತಮಾನೋತ್ಸವ ದಿನದಂದು ಮೇ ದಿನ ಕ್ರಾಂತಿಕಾರಿ ಪರಂಪರೆ ಕಾಯ್ದುಕೊಳ್ಳಲು ಕರೆ ನೀಡಿತ್ತು. ಸಮಾಜವಾದದ ರಕ್ಷಣೆಗೆ ಮುಂದೆ ಬರಲು, ಮಹಾನ್ ಅಕ್ಟೋಬರ್ ಕ್ರಾಂತಿಯ ವಿಜಯವನ್ನು, ಸಮಾಜವಾದದ ಮಾನವಕುಲದ ಅಪಾರ ಮುನ್ನಡೆಯನ್ನು, ಬಂಡವಾಳಶಾಹಿ ಒಂದು ಬಿಕ್ಕಟ್ಟುಮಯ ವ್ಯವಸ್ಥೆ ಎಂಬುದನ್ನು ನೆನಪಿಸಿಕೊಳ್ಳಬೇಕೆಂದು ಕರೆ ನೀಡಿತ್ತು.

ದೇಶದ ಆರ್ಥಿಕ ಧೋರಣೆಗೆ ಸರಿಯಾದ ದಿಕ್ಕು ನೀಡಬೇಕು, ಪ್ರಜಾಪ್ರಭುತ್ವ ಹಕ್ಕುಗಳನ್ನು ವಿಸ್ತರಿಸಬೇಕು ಎಂದು ಒತ್ತಾಯಿಸಬೇಕೆಂದು, ಸಿ.ಐ.ಟಿ.ಯು ಸಂಘಗಳು ಮಹಿಳೆಯರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕು ಅಸಂಘಟಿತ ಕಾರ್ಮಿಕರನ್ನು ಸಂಘಟಿಸಲು, ಕನಿಷ್ಟ ಕೂಲಿ ಮತ್ತಿತರ ಬೇಡಿಕೆಗಳಿಗಾಗಿ ಒಂದು ಅಖಿಲ ಭಾರತ ಆಂದೋಲನ ರೂಪಿಸಬೇಕೆಂದು ಕರೆ ನೀಡಿತ್ತು.

ರಾಜ್ಯದ ಹಲವೆಡೆ ನಡೆದ ಮೇ ದಿನ ಶತಮಾನೋತ್ಸವ ಸಭೆ ಸಮಾರಂಭಗಳ ಮೇ ದಿನ ಪ್ರಣಾಳಿಕೆಯ ಈ ಅಂಶಗಳನ್ನು ಕಾರ್ಮಿಕರವರೆಗೆ ತಲುಪಿಸಿದವು. ಜತೆಗೆ ರಾಜ್ಯದ ಕಾಂಗ್ರೆಸ್(ಐ) ಸರಕಾರದ ದುಡಿಮೆಗಾರ-ವಿರೋಧಿ ನಿಲುವನ್ನು ಕಾರ್ಮಿಕರು ಖಂಡಿಸಿದರು. ದೇಶದ ಐಕ್ಯತೆಗೆ ಕೋಮುವಾದಿಗಳಿಂದ ಪ್ರತ್ಯೇಕತಾವಾದಿಗಳಿಂದ ತೀವ್ರ ಸವಾಲನ್ನು ಎದುರಿಸುವಲ್ಲಿ ಕಾರ್ಮಿಕ ವರ್ಗದ ನಿರ್ಧಾರವೂ ವ್ಯಕ್ತಗೊಂಡಿತು.

ಬೆಂಗಳೂರು

ಸಿ.ಐ.ಟಿ.ಯು ಮತ್ತು ಎ.ಐ.ಟಿ.ಯು.ಸಿ. ಜಂಟಿಯಾಗಿ ನಗರದಲ್ಲಿ ಮೇ ದಿನ ಶತಮಾನೋತ್ಸವ ಆಚರಿಸಿದರು. ನಗರದ ಹಲವೆಡೆಗಳಿಂದ ಕಾರ್ಮಿಕರ ಮೆರವಣಿಗೆಗಳು ಸಿಲ್ವರ್ ಜ್ಯೂಬಲಿಪಾರ್ಕ್‌ನಲ್ಲಿ ಒಟ್ಟು ಸೇರಿದವು. ಇಲ್ಲಿ ನಡೆದ ಸಭೆಯಲ್ಲಿ ಸಿ.ಐ.ಟಿ.ಯು ರಾಜ್ಯ ಅಧ್ಯಕ್ಷ ಸೂರ್ಯನಾರಾಯಣರಾವ್, ಎ.ಐ.ಟಿ.ಯುಸಿ. ಮುಖಂಡ ಎಸ್. ಮಹಾದೇವನ್ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಎ.ಐ.ಟಿ.ಯು.ಸಿ. ಮುಖಂಡ ನರಸಿಂಹನ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡಯಿತು. ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಕೆ.ಎಸ್.ಸುಬ್ರಮಣ್ಯ ವಂದಿಸಿದರು.

ಸಭೆಯ ಅಂತ್ಯದಲ್ಲಿ ರಾಷ್ಟ್ರದ ಐಕ್ಯತೆಯನ್ನು ರಕ್ಷಿಸಿ, ಭಯೋತ್ಪಾದಕತೆ, ಕೋಮುವಾದವನ್ನು ಸೋಲಿಸುವುದಾಗಿ ಕಾರ್ಮಿಕರು ಪ್ರತಿಜ್ಞೆ ಸ್ವೀಕರಿಸಿದರು.

ಚಿಕ್ಕಮಗಳೂರು

ಕಾಫಿ ಕ್ಯೂರಿಂಗ್ ಮತ್ತು ಇತರೆ ಕಾರ್ಮಿಕ ಸಂಘದ ಆಶ್ರಯದಲ್ಲಿ ನಗರದಲ್ಲಿ ಮೇ ದಿನ ಶತಮಾನೋತ್ಸವ ನಡೆಯಿತು. ಡೊಮಿನಿಕ್ ಕ್ರಾಂತಿ ಗೀತೆ ಹಾಡಿದರು. ಬಿ.ಈ.ಶಂಕರ್ ಸ್ವಾಗತಿಸಿದರು. ಅಧ್ಯಕ್ಷತೆ ವಹಿಸಿದ್ದ ಸಂಘದ ಉಪಾಧ್ಯಕ್ಷ ವಿ. ಸುಕುಮಾರ್ ಕಾರ್ಮಿಕವರ್ಗ ಎಲ್ಲಾ ಸಮಸ್ಯೆಗಳಿಗೂ ಸಂಘಟಿತ ಹೋರಾಟ ನಡೆಸಬೇಕೆಂದು ಕರೆಯಿತ್ತರು. ಸಕಲೇಶ ಪುರದ ಮರಸಾಗರ್ ಎಸ್ಟೇಟಿನ ವಾರಿಜಾ ಅಬ್ದುಲ್‌ಜಬ್ಬಾರ್ ಮಾತನಾಡಿದರು. ಕಾಫಿ ಕ್ಯೂರಿಂಗ್‌ನ ಎನ್. ರಾಧಾ ವಂದನಾರ್ಪಣೆ ಮಾಡಿದರು. ನಗರದ ವಿವಿಧ ಕೂರಿಂಗ್‌ಗಳಿಂದ ೨೫೦ ಮಹಿಳಾ ಕಾರ್ಮಿಕರು ಈಸಮಾರಂಭದಲ್ಲಿ ಭಾಗವಹಿಸಿದ್ದರು.

ಬಂಟ್ವಾಳ

ವಿಟ್ಲದಲ್ಲಿ ಕೆ.ಕೂಸಪ್ಪಯ್ಯಕಾಮತ್‌ರವರ ಅಧ್ಯಕ್ಷತೆಯಲ್ಲಿ ನಡೆದ ಮೇ ದಿನಾಚರಣೆಯ ಸಭೆಯಲ್ಲಿ ಸಿ.ಐ.ಟಿ.ಯು ಮುಖಂಡ ಬಿ. ವಾಸು ಗಟ್ಟಿಯವರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ ಕಾರ್ಮಿಕವರ್ಗದ ಅಂತರರಾಷ್ಟ್ರೀಯತೆಯನ್ನು ಎತ್ತಿ ಹಿಡಿಯಲು, ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಥವನ್ನು ಅನುಸರಿಸುವಂತೆ ಕರೆ ನೀಡಿದರು. ಎ. ರಾಮಣ್ಣನವರು ಸ್ವಾಗತ ಕೋರಿದರು.

ಸಿರುಗುಪ್ಪ

ಸಿ.ಐ.ಟಿ.ಯು ಅಧ್ಯಕ್ಷ ಹೆಚ್.ರಾಮಾಂಜನೇಯ ಕೆಂಬಾವುಟ ಧ್ವಜ ಹಾರಿಸಿ ಆರಂಭಿಸಿದ ಸಭೆಯಲ್ಲಿ ಕೆ.ಬಸವನಗೌಡ, ಹೆಚ್.ಚನ್ನಬಸಪ್ಪ ಎಸ್.ವೀರಣ್ಣ ಮಾತನಾಡಿ ಹೋರಾಟದ ಪರಂಪರೆ ಎತ್ತಿಹಿಡಿಯಲು ಕಾರ್ಮಿಕರಿಗೆ ಕರೆ ನೀಡಿದರು. ಬಿ. ಲಕ್ಷ್ಮಣರವರ ಅಧ್ಯಕ್ಷತೆಯಲ್ಲಿ ನಡೆದಸಭೆಗೆ ಕಾರ್ಮಿಕರನ್ನು ಬಿ. ಶಿವಲಿಂಗಪ್ಪ ಸ್ವಾಗತಿಸಿದರು. ಬಿ.ವೀರಣ್ಣ ವಂದನಾರ್ಪಣೆ ಸಲ್ಲಿಸಿದರು.

ಗುಲ್ಬರ್ಗಾ

ಆಳಂದ ಸಕ್ಕರೆ ಕಾರ್ಖಾನೆ ನೌಕರರ ಮತ್ತು ಕಾರ್ಮಿಕರ ಸಂಘದ ಆಶ್ರಯದಲ್ಲಿ ಎಂ.ಎಲ್.ಎ. ಶರಣಬಸಪ್ಪಾ ಮಾಲಿ ಪಾಟೀಲರವರ ಅಧ್ಯಕ್ಷತೆಯಲ್ಲಿ ಜರುಗಿತು. ಬಾಳಾಸಾಕೇಬ ದೇಶಮುಖ ಕೆಂಬಾವುಟ ಹಾರಿಸಿದರು. ಸಿ.ಪಿ.ಐ.(ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿ ಸದಸ್ಯ ಬಸವರಾಜ ಮರಡಿ ಕಾರ್ಮಿಕರು ಹೋರಾಟದಿಂದ ರಾಜಕೀಯ ಚಿತ್ರ ಬದಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು. ಹಡಪದ ಅವರು ವಂದಿಸಿದರು.

ಸಭೆ ಆರಂಭವಾಗುವ ಮೊದಲು ಹಾಗೂ ನಡುವೆ ಕಾರ್ಖಾನೆಯ ಮಾಜಿ ಡೈರೆಕ್ಟರುಗಳು ಪಟ್ಟಭದ್ರ ಹಿತಾಸಕ್ತಿಗಳು ಇಂಕ್ವಿಲಾಬ್ ಜಿಂದಾಬಾದ್, ಜಗತ್ತಿನ ಕಾರ್ಮಿಕರೇ ಒಂದಾಗಿ, ಸಾಮ್ರಾಜ್ಯಶಾಹಿ ಗಳಿಗೆ ಧಿಕ್ಕಾರ ಇತ್ಯಾದಿ ಘೋಷಣೆ ಕೂಗಬಾರದೆಂದು ಹೇಳಿದರೂ ಅದು ಅನಗತ್ಯ ಎಂದರೂ ಮೇ ದಿನಾಚರಣೆಯ ಸ್ಫೂರ್ತಿ ತುಂಬಿದ್ದ ಕಾರ್ಮಿಕರು ಈ ಎಲ್ಲಾ ಘೋಷಣೆಗಳಿಗೆ ಒಗ್ಗೊಟ್ಟರು.

ಕುಂದಾಪುರ

ಎಂದಿನಂತೆ ಕುಂದಾಪುರದಲ್ಲಿ ಮೇ ದಿನ... ಉತ್ಸಾಹದಿಂದ ಆಚರಿಸಲಾಯಿತು. ಸುಮಾ... ಎರಡು ಸಾವಿರ ಕಾರ್ಮಿಕರು, ರೈತರು ಭಾಗವಹಿಸಿ... ಭವ್ಯ ಮೆರವಣಿಗೆಯ ನಂತರ ನಡೆದ ಬಹಿರಂ... ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು ಮುಂದಾಳು ಅಬ್ರಹಾಂ ಕರ್ಕಡ ವಹಿಸಿದ್ದರ... ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು ರಾಜ್ಯ ಉಪಾಧ್ಯಕ್ಷ ಹಾಗೂ ಸಿ.ಪಿ.ಐ(ಎಂ) ರಾ... ಸೆಕ್ರೆಟಾರಿಯೆಟ್ ಸದಸ್ಯರಾದ ಸಿ. ನಂಜುಂಡಪ್ಪನವ... ಅಂತರಾಷ್ಟ್ರೀಯ ರಂಗದಲ್ಲಿ ಪೂರ್ವಯುರೋಪಿ... ಬೆಳವಣಿಗೆಗಳು, ನಮೀಬಿಯಾ ಸ್ವಾತಂತ್ರ್ಯ, ದಕ್ಷಿ... ಆಫ್ರಿಕಾದಲ್ಲಿ ಹೋರಾಟ ನೇಪಾಳದ... ಪ್ರಜಾಪ್ರಭುತ್ವದ ವಿಜಯದ ಮಹತ್ವವನ... ವಿವರಿಸಿದರು. ರಾಷ್ಟ್ರೀಯ ರಂಗದ ಜನಪ... ನೀತಿಗಳನ್ನು ಸ್ವಾಗತಿಸಿದರೂ, ಸರ್ಕಾರದ ಆರ್ಥಿಕ ನೀ... ಬದಲಿಸಬೇಕೆಂದೂ, ಇಲ್ಲವಾದರೆ ಬೇಗನೇ ಅದ... ದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತ... ಎಂದು ಎಚ್ಚರಿಸಿದರು. ರಾಜ್ಯದ ಕಾಂಗ್ರೆಸ್(ಐ) ಧೋರಣೆಗಳನ್ನು ತೀವ್ರವಾಗಿ ಖಂಡಿಸಿದರು. ಡಿ.ವೈ.ಎಫ್.ಐ. ಮುಖಂಡ ಆರ್.ಜಯಕುಮಾ... ಇತ್ತೀಚಿನ ಮುನಿಸಿಪಲ್ ಚುನಾವಣೆಗಳಲ್ಲಿ ಗ... ದುಡಿಯುವ ಜನರ ಪ್ರತಿನಿಧಿಗಳನ್ನು ಪರಿಚಯಿ... ದರು. ಕಾಂಗ್ರೆಸ್‌ನ ಇತ್ತೀಚಿನ ಬಜೆಟ್‌ನಿಂದಾಗಿ ಶಾಲ... ಶಿಕ್ಷಣದ ಮೇಲಾಗಿರುವ ಕೆಟ್ಟ ಪರಿಣಾಮವ... ವರಿಸಿದರು. ಅಧ್ಯಕ್ಷ ಭಾಷಣ ಮಾಡಿದ ಅಬ್ರಹಾ... ಕರ್ಕಡ ಅವರು ರೈತಾಪಿ ಜನಕ್ಕೆ ಕಾಂಗ್ರೆಸ್(... ಆಳ್ವಿಕೆಯಿಂದಾಗಿರುವ ಸಂಕಷ್ಟಗಳನ್ನು ವಿವರಿಸಿದರು... ಸಿ.ನಾರಾಯಣ ಅವರು ಆರಂಭದಲ್ಲಿ ಸ್ವಾಗತಿಸಿದರು.

ಮಂಗಳೂರಿನಲ್ಲಿಯೂ, ಇತರೆಡೆಗಳಲ್ಲಿಯ... ನೂರಾರು ಕಾರ್ಮಿಕರು ಭಾಗವಹಿಸಿದ್ದ ಮೆರವಣ... ಸಭೆಗಳ ಮೂಲಕ ಮೇ ದಿನ ಶತಮಾನೋತ್ಸ... ಆಚರಿಸಿದ ಸುದ್ದಿಗಳು ಬರುತ್ತಿವೆ. ವಿವರಗಳು... ಮುಂದಿನ ವಾರ ಪ್ರಕಟಿಸಲಾಗುವುದು.



ಬೆಂಗಳೂರಿನಲ್ಲಿ ಮೇ ದಿನದ ರ್‍ಯಾಲಿ ಒಂದು ದೃಶ್ಯ

ಹೋ! ನಾನು ಯಾರು ಗೊತ್ತೇ! ರಷ್ಯನ್ ಗಣತಂತ್ರದ ನಾಗರಿಕ!

ಇತಿಹಾಸದ ಪುಟಗಳಿಂದ

ಪುಟ್ಟ ನಾನಿಲ್ಕ ಪೆಟ್ರೋಗ್ರಾಡ್‌ನ ಲಿಟ್ವಿನಿ ಬಹುಅಂತಸ್ತಿನ ಕಟ್ಟಡವೊಂದರ ನೆಲ ಮಾಳಿಗೆಯಲ್ಲಿ ವಾಸವಾಗಿದ್ದ ಕಾರ್ಮಿಕ ದಂಪತಿಗಳ ಮಗ. ಅವನು ಹುಟ್ಟಿದ್ದು ಬೆಳೆದದ್ದು ಇದೇ ಕಟ್ಟಡದಲ್ಲೇ. ಆದ್ದರಿಂದ ಅವನಿಗೆ ಕಟ್ಟಡದಲ್ಲಿ ವಾಸವಾಗಿರುವ ಎಲ್ಲರ ಬಗೆಗೂ ಗೊತ್ತಿತ್ತು. ಆ ಕಟ್ಟಡದಲ್ಲಿ ರಾಜವಂಶದವರು, ಕುಲಿನರು ರಾಜನ ಆಸ್ಥಾನದಲ್ಲಿ ಬಿರುದಾವಳಿ ಹೊಂದಿದ ಅಧಿಕಾರಿಗಳು ವಾಸವಾಗಿದ್ದರು. ದಾನಿಲ್ಕ ಪುಟ್ಟನಾಗಿದ್ದರೂ ಅವರ ಬಿರುದಾವಳಿಗಳು ಅದರಲ್ಲಿ ಯಾರು ಮೇಲೆ ಯಾರು ಕೆಳಗೆ ಎಂದು ಅವನಿಗೆ ಗೊತ್ತಿತ್ತು

ಕಳೆದ ಕೆಲವು ದಿನಗಳಲ್ಲಿ ಅಕ್ಟೋಬರ್ ಕ್ರಾಂತಿ ನಡೆದು ಹೋಗಿತ್ತು. ಎಷ್ಟೊ ಹೊಸ ಹೊಸ ಘಟನೆಗಳು ನಡೆಯುತ್ತಿದ್ದುವೆಂದರೆ ದಾನಿಲ್ಕನಿಗೆ ಆಶ್ಚರ್ಯವೇ ಅನಿಸುತ್ತಿರಲಿಲ್ಲ. ಆದರೆ......

ಅವತ್ತು ತಂದೆ ಕಾರ್ಖಾನೆಯಿಂದ ಬಂದವನು ಪೇಪರು ಮಡಚಿಡುತ್ತಾ, ಮಗನನ್ನು ಕರೆದು ಹೇಳಿದ.

"ಬಾರಪ್ಪಾ ಇಲ್ಲಿ. ನೀನು ಇಂದಿನಿಂದ ರಷ್ಯನ್ ಗಣತಂತ್ರದ ನಾಗರಿಕ.ವ್ಲಾದಿಮಿರ್ ಉಲ್ಯಾನೋವ್ ಲೆನಿನ್‌ರೇ ಹಾಗೆಂದು ಆಜ್ಞೆ ಹೊರಡಿಸಿದ್ದಾರೆ"

ದಾನಿಲ್ಕನಿಗೆ ನಂಬಲು ಆಗಲಿಲ್ಲ, ರಷ್ಯನ್ ಗಣತಂತ್ರದ ನಾಗರೀಕನಾಗುವುದು ಅಂದರೆ ಏನು ಎಂಬುದು ಅರ್ಥವಾಗಲಿಲ್ಲ.

"ಅದು ಮೇಲು ಮಾಳಿಗೆಯಲ್ಲಿರುವ ಆರ್ಡಟೋವರ "ಸ್ಟಾಟ್ಸ್ಕಿ ಸೋವೆಟ್‌ನಿಕ್" ಬಿರುದಿಗಿಂತಲೂ ಹೆಚ್ಚಿನ ಬೆಲೆಯದ್ದೇ? ಎಂದು ಕೇಳಿದ ದಾನಿಲ್ಕ.

"ಹೌದು. ಅದಕ್ಕಿಂತಲೂ ಹೆಚ್ಚು ಬೆಲೆಯಿರುವಂಥ ಬಿರುದು."

"ಮೂರನೇ ಮಾಳಿಗೆಯಲ್ಲಿದ್ದಾರಲ್ಲ ಗೊರೋಚೋವಾ ಅವರ ಬಿರುದು' ಟೈನಿ ಸೋವೆಟ್‌ನಿಕ್"ಗಿಂತಲೂ ಹೆಚ್ಚಿನದ್ದ?"

"ಹೌದು ಅದಕ್ಕಿಂತಲೂ ಹೆಚ್ಚಿನದ್ದು"

"ಕೌಂಟ್ ಮತ್ತು ರಾಜಕುಮಾರನಕ್ಕಿಂತಲೂ ಹೆಚ್ಚಿನದ್ದೆ?"

(ಆಗ ರಾಜ ಮನೆತನದವರಿಗೆ, ಭಾರೀ ಜಮೀನುದಾರರಿಗೆ ಇಂತಹ ಬಿರುದಾವಳಿಗಳು ಇರುತ್ತಿದ್ದವು') "ಹೌದಪ್ಪಾ ಹೌದು, ಎಲ್ಲ ಬಿರುದುಗಳಿಗಿಂತಲೂ ಹೆಚ್ಚಿನ ಬಿರುದು" ಎಂದು ತಂದೆ ನಗುತ್ತಾ ಹೇಳಿದ.

ದಾನಿಲ್ಕನಿಗೆ ಭಾರಿ ಖುಶಿಯಾಯಿತು. ಹೊರಗೆ ಓಡಿದ ತನ್ನೆಲ್ಲಾ ಮಿತ್ರರು, ಒರಗೆಯವರು, ಗೊತ್ತಿದ್ದ, ಎದುರಿಗೆ ಸಿಕ್ಕಿದ ಎಲ್ಲರಿಗೂ ಹೇಳಿದ

"ನಾನು ಈಗ ರಷ್ಯನ್ ಗಣತಂತ್ರದ ನಾಗರಿಕ ಅದು ಎಲ್ಲ ಬಿರುದಾವಳಿಗಿಂತಲೂ ಹೆಚ್ಚಿನದಂತೆ ಇದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಲೆನಿನ್‌ರೇ ಈ ಆಜ್ಞೆ ಹೊರಡಿಸಿದ್ದಾರೆ." ದಿನವಿಡೀ ಎಲ್ಲರಿಗೂ ಹೇಳುತ್ತಾ ಎಷ್ಟುಓಡಾಡಿದ ಎಂದರೆ ದಾನಿಲ್ಕ ಸುಸ್ತಾಗಿ ಒಂದು ಕಡೆ ಕುಳಿತ. ಯೋಚಿಸಿದ. ಈ ಲೆನಿನ್‌ಗೆ ನನ್ನ ಬಗ್ಗೆ ಹೇಗೆ ಗೊತ್ತಾಗಿರಬೇಕು ಎಂದು ಅವನಿಗೆ ಯೋಚನೆ ಹತ್ತಿಕೊಂಡಿತು! ಅಷ್ಟರಲ್ಲಿ ಅವನ ಮಿತ್ರ ಕೈರಿಲ್ ಬರುತ್ತಿರುವುದು ಕಾಣಿಸಿತು. ತಾನು ರಷ್ಯನ್ ಗಣತಂತ್ರದ ನಾಗರೀಕನಾಗಿರುವ ಬಗ್ಗೆ ಲೆನಿನ ಆಜ್ಞೆ ಹೊರಡಿಸಿದ್ದರ ಬಗ್ಗೆ ಹೇಳಿದ ಒಂದೇ ಉಸಿರಿನಲ್ಲಿ "ನೀನು ಯಾವ ನಾಗರಿಕ? ನಮ್ಮಪ್ಪ ಹೇಳ್ತಾ ಇದ್ದರು, ನಾನು ನಾಗರೀಕ ಅಂತ. ಹಾಗಂತ ಪೇಪರಲ್ಲಿ ಬಂದಿದೆಯಂತೆ. "ನೀನಲ್ಲ. ನಾನು ನಾಗರಿಕ"

"ನೀನಲ್ಲ ನಾನು ನಾಗರಿಕ ನಿನ್ನ ಬಗ್ಗೆ ಯಾರು ತಲೆಕೆಡಿಸಿಕೊಳ್ಳುತ್ತಾರೆ"

"ನಾನು ನಾಗರಿಕ" "ನಾನು ನಾಗರೀಕ" ಎಂದು ದಾನಿಲ್ಕ ಮತ್ತು ಕೈರಿಲ್ ಕಿತ್ತಾಡತೊಡಗಿದರು. ದಾರಿಯಲ್ಲೇ! 'ಅಲ್ಲೇ! ಹಾದು ಹೋಗುತ್ತಿದ್ದ ಯುವಕ ಕಾರ್ಮಿಕನೊಬ್ಬ ಕಿತ್ತಾಡುತ್ತಿದ್ದ ಈ ಹುಡುಗರನ್ನು ಬಿಡಿಸಿದ. ಯಾತಕ್ಕೆ ಜಗಳಾಡುತ್ತಿದ್ದೀರಿ ಎಂದು ಕೇಳಿದ. ಮೊದಲು ಇಬ್ಬರು ಬಾಯಿಬಿಡಲಿಲ್ಲ. ಆಮೇಲೆ ಕಾರಣ ಹೇಳಿದರು. ಯುವಕ ಜೋರಾಗಿ ನಕ್ಕ. "ನೀವಿಬ್ಬರು ಒಂದು ರೀತಿಯಲ್ಲಿ ಸರಿ ನೀನು ನಾಗರೀಕ ಅವನೂ ನಾಗರೀಕ ನಾನೂ ನಾಗರಿಕ ಎಲ್ಲರೂ ನಾಗರೀಕರೇ" ಅಂದಿನ ದಿನಪತ್ರಿಕೆಯನ್ನು ತೋರಿಸಿ ಓದುತ್ತಾ ಮುಂದುವರಿಸಿದ "ಇವತ್ತು ಲೆನಿನ್‌ರವರು ಒಂದು ಆಜ್ಞೆ ಹೊರಡಿಸಿದ್ದಾರೆ. ಎಲ್ಲ ಎಸ್ಟೇಟುಗಳು ಮತ್ತು ಬಿರುದಾವಳಿಗಳನ್ನು ರದ್ದು ಮಾಡುವ ಆಜ್ಞೆ ಅದು ಎಲ್ಲರಿಗೂ 'ನಾಗರಿಕ' ಎಂಬ ಸಮಾನ ಒಂದೇ ಬಿರುದು ಇರುತ್ತದೆ. ಯಾರು ಮೇಲಲ್ಲ, ಯಾರೂ ಕೀಳಲ್ಲ, ಎಲ್ಲರಿಗೂ ಸಮಾನ ಹಕ್ಕು ಲೆನಿನ್ ಈ ಆಜ್ಞೆಯನ್ನು ನಿನಗೂ, ಇವನಿಗೂ, ನನಗೂ, ಎಲ್ಲರಿಗೋಸ್ಕರ ರಷ್ಯನ್ ದೇಶದ ಎಲ್ಲಾ ಜನತೆಗೋಸ್ಕರ ಹೊರಡಿಸಿದ್ದಾರೆ". ಎಂದ.

ದಾನಿಲ್ಕನಿಗೆ ಮೊದಲು ಒಂಥರಾ ಆಯಿತು! ಲೆನಿನ್ ಆಜ್ಞೆ ತನಗಾಗಿ ಮಾತ್ರ ಹೊರಡಿಸಲಿಲ್ಲವಲ್ಲಾ ಅಂತ! ಆದ... ಮೇಲೆ ಯೋಚನೆ ಮಾಡಿ ಅಂದುಕೊಂ... ಎಲ್ಲರಿಗಾಗಿ ಆಜ್ಞೆ ಹೊರಡಿಸಿದ್ದು ಒಂ... ರೀತಿಯಲ್ಲಿ ಒಳ್ಳೆಯದೇ ಆಯಿ... ಲೆನಿನ್ ಯಾರನ್ನು ಮರೆತು ಬಿಡಲಿ... ತನ್ನ ತಂದೆ-ತಾಯಿಗಳನ್ನು, ಕೈರಿಲ್‌ನ... ಅವನ ತಂದೆ-ತಾಯಿಗಳನ್ನು ಅ... ಎಲ್ಲಾ ಮಿತ್ರರನ್ನು, ಗೊತ್ತಿರುವವರ... ಮರೆತುಬಿಟ್ಟಿರಲಿಲ್ಲ.

ದಾನಿಲ್ಕನೇನೋ ಲೆನಿನ್‌ರ ಆ... ಯಿಂದ ಸಮಾಧಾನ ಪಟ್ಟ ಆದರೆ ಆ... ಮನೆಯಲ್ಲಿದ್ದ ಇತರ ಬಿರುದಾ... ಪಡೆದ 'ದೊಡ್ಡವರಿಗೆ' ಲೆನಿನ್‌ರ ಆ... ಹಿಡಿಸಲಿಲ್ಲ. ಅವರು ಊರು ಬಿ... ಹೋದರು. ದೇಶವೇ ಬಿಟ್ಟು ಹೋದ... ದಾನಿಲ್ಕನಿಗೆ ಒಳ್ಳೆಯದೇ ಆಯಿ... ಅವನ ತಂದೆ-ತಾಯಿಯಂತೆ ಇರುವ... ಆ ಮನೆಗಳಿಗೆ ಬಂದರು. ಅವನಿಗೆ ... ಮಿತ್ರರು, ಒರಗೆಯವರು ಸಿಕ್ಕಿದ... ಅವನಿಗೆ ಬೆಳೆಯುತ್ತಾ ಹೋ... ಗೊತ್ತಾಯಿತು, ಅವನು ಮತ್ತು ಎಲ... ನಾಗರಿಕರಾದದ್ದು ಮಾತ್ರವಲ್ಲ, ದೇ... ಯಜಮಾನಿಕೆಯೂ ಅವರ ಕೈಯ... ಬಂದಿತ್ತು.

ಬಸ್ ಪ್ರಯಾಣದರ ಏರಿಕೆಯ ವಿರುದ್ಧ ರಾಜ್ಯವ್ಯಾಪಿ ಚಳುವಳಿಗೆ ಕರೆ

ಭೂಸುಧಾರಣೆಗಳಿಗಾಗಿ ಹೋರಾಟವಿಲ್ಲದೆ ದಲಿತರ ಉದ್ಧಾರ ಅಸಾಧ್ಯ ಎಂಬುದನ್ನು ಬಸವಲಿಂಗಪ್ಪನವರು ಅರಿಯಬೇಕು

ಮಂಡಲ ಪಂಚಾಯಿತಿಯ ಪ್ರಧಾನರ ಹುದ್ದೆಯನ್ನು ಸರದಿಯ ಮೇಲೆ ...ಲ್ಲರಿಗೂ ಸಿಗುವಂತೆ ಮಾಡುವ ಮುಖಾಂತರ ದಲಿತರಿಗೂ ಅವಕಾಶ ಸಿಕ್ಕಲಿ, ...ಮೀಣ ಪಾಳೆಗಾರಿ ಶಕ್ತಿಗಳಾದ ದೇಸಾಯಿ, ಶಾನುಭೋಗ ಪಟೇಲರ ಹಿಡಿತದಿಂದ ...ಲಿತರಿಗೆ ಆಗುವ ಅನ್ಯಾಯವನ್ನು ತಡೆಯಲು ಸಾಧ್ಯವೆಂದು ಮಾನ್ಯ ಶ್ರೀ ...ಸವಲಿಂಗಪ್ಪನವರು, ಬಾಬಾ ಸಾಹೇಬ ಅಂಬೇಡ್ಕರ್ ಜನ್ಮ ಶತಮಾನೋತ್ಸವದ ...ಂದರ್ಭದಲ್ಲಿ ಹೇಳಿರುವರು ಎಂಬ ಗಂಭೀರ ಸಂಗತಿ ಬಗ್ಗೆ ಸಿ.ಪಿ.ಐ.(ಎಂ) ರಾಜ್ಯ ...ಕ್ರೆಟಾರಿಯೇಟ್ ಒಂದು ಪತ್ರಿಕಾ ಹೇಳಿಕೆ ನೀಡಿ ಸಚಿವ ಬಸವಲಿಂಗಪ್ಪನವರು ...ಗ್ರಾಮೀಣಾಭಿವೃದ್ಧಿಗಾಗಿ ರಚನೆಗೊಂಡ ಸಂಸ್ಥೆಗಳಾದ ಮಂಡಲ ಪಂಚಾಯತಿಗಳಲ್ಲಿ ...ಮಾರು 2542,ರಲ್ಲಿ ಪಾಳೇಗಾರಿ ಭೂಮಾಲೀಕರು ಅಧಿಕಾರ ಹಿಡಿಯಲು ...ಧ್ಯವಾಗಿದೆ, ಇದರಿಂದಾಗಿ ದಲಿತರಿಗೆ ಅಧಿಕಾರವೂ ಇಲ್ಲ, ಹಾಗೂ ಅಭಿವೃದ್ಧಿಗಾಗಿ ...ಡುವ ಹಣದ ಅಪವ್ಯಯವಾಗುತ್ತಿದೆಯೆಂದು ಹೇಳಿರುವುದು ಸತ್ಯಾಂಶವೂ ...ಗೂ ಸ್ವಾಗತಾರ್ಹವೂ ಆಗಿದೆ ಎಂದಿದೆ.

ಮಾನ್ಯ ಸಚಿವರು, ದಲಿತರ ಬಗ್ಗೆ ಕಾಳಜಿ ಹೊಂದಿದ್ದು ಗ್ರಾಮೀಣಾಭಿವೃದ್ಧಿ ...ತೆಯಲ್ಲಿಯೇ ಮುಂದುವರೆದಿದ್ದರೆ, ಸರದಿಯ ಮೇಲೆ ದಲಿತರನ್ನು ...ಧಾನರನ್ನಾಗಿ ಮಾಡಿ ಅವರ ವಿಮೋಚನೆ ಮಾಡುವ ಉದ್ದೇಶ ಹೊಂದಿದ್ದರೆಂದು ...ಳಿದ್ದಾರೆ, ಈಗ ಆ ಅಧಿಕಾರ ತಮ್ಮ ಕೈಯಲ್ಲಿಲ್ಲ, ಹಾಗಾಗಿ ತಮ್ಮ ಸರಕಾರ ಆ ...ಸ ಮಾಡಲಾರದೆಂದು, ದಲಿತರೆಲ್ಲ ಬೌದ್ಧ ಧರ್ಮಕ್ಕೆ ಸೇರಿ ವಿಮೋಚನೆ ...ಡೆಯಲು ಕರೆಕೊಟ್ಟಿದ್ದಾರೆ.

ರಾಷ್ಟ್ರದ ಹಾಗೂ ಕರ್ನಾಟಕ ರಾಜ್ಯದ ಆಡಳಿತಯಂತ್ರವನ್ನು ಕಾಂಗ್ರೆಸ್ ಪಕ್ಷದ ...ಯಲ್ಲಿಟ್ಟುಕೊಂಡು ಪಾಳೇಯಗಾರಿ ಭೂಮಾಲೀಕ ಶಾನುಭೋಗ, ದೇಸಾಯಿ, ...ಟೇಲರ ಹೆಚ್ಚುವರಿ ಭೂಮಿಯನ್ನು ಕಿತ್ತು ಭೂರಹಿತ ದಲಿತ, ಹಾಗೂ ಇತರ ...ಡವರಿಗೆ ಹಂಚಲು ನಿರಾಕರಿಸಿ, ಎಡ ಶಕ್ತಿಗಳು ಈ ಕೆಲಸ ಮಾಡುವಾಗ ಇದೇ ...ಮಾಲೀಕರ ಪರವಾಗಿ ನಿಂತು ದಮನ ಮಾಡಿದ ಕಾಂಗ್ರೆಸ್ ಪಕ್ಷದ ...ಮುಖಂಡರಾದ ಶ್ರೀ ಬಸವಲಿಂಗಪ್ಪನವರು ಗ್ರಾಮೀಣ ಆರ್ಥಿಕ ಹಿಡಿತವನ್ನು ...ಭೂಮಾಲೀಕರ ಕೈಯಲ್ಲಿಯೇ ಉಳಿಸಿ ಅದನ್ನು ರಕ್ಷಣೆ ಮಾಡುತ್ತಿರುವ ಸಂಸ್ಥೆಯಾದ ...ಕಾಂಗ್ರೆಸ್‌ನಲ್ಲಿಯೇ ಉಳಿದು, ದಲಿತರ ವಿಮೋಚನೆ ಮಾಡಲು ರಾಜಕೀಯ ...ಧಾರ್ಮಿಕ ಕಾರಣಗಳನ್ನು ಕೊಡುವುದು, ಅವರ ಪ್ರಾಮಾಣಿಕತೆಯ ಪ್ರಶ್ನೆಯಾಗಿದೆ ...ಎಂದು ಸಿ.ಪಿ.ಐ. (ಎಂ) ಅಭಿಪ್ರಾಯ.

ಒಂದೆಡೆ ಅಪೆಲ್ಲಿಟ್ ಟ್ರಿಬನಲ್ ರದ್ದು ಮಾಡುತ್ತಾ, ಲಕ್ಷಾಂತರ ಎಕರೆ ಸರಕಾರ ...ಭೂಮಿಯಲ್ಲಿರುವ ದಲಿತರಿಗೆ ಖಾಯಂ ಹಕ್ಕು ಕೊಡುವ ಕುರಿತು ಯೋಚನೆ ...ಇಲ್ಲದ ಕಾಂಗ್ರೆಸ್‌ನಲ್ಲಿದ್ದುಕೊಂಡು ದಲಿತರ ಉದ್ಧಾರದ ಭಾಷಣವನ್ನು ಕಾರ್ಯಗತ ...ಮಾಡುವ ಆಸಕ್ತಿ ಹೊಂದಿದ್ದು ಶ್ರೀ ಬಸವಲಿಂಗಪ್ಪನವರು ದಲಿತರ ಆರ್ಥಿಕ ...ವಿಮೋಚನೆಗಾಗಿ ಭೂಸುಧಾರಣೆಗಾಗಿ ಹೋರಾಡುವ ಪಾಳೇಗಾರಿ ವಿರೋಧಿ ...ಪ್ರಜಾಪ್ರಭುತ್ವ ಶಕ್ತಿಗಳ ಜೊತೆ ಸೇರದೆ ದಲಿತರ ಉದ್ಧಾರ ಅಸಾಧ್ಯವೆಂಬುದನ್ನು ...ಅರ್ಥೈಸಿಕೊಳ್ಳಬೇಕಾಗಿದೆ ಎಂದು ಸಿ.ಪಿ.ಐ. (ಎಮ್) ರಾಜ್ಯ ಕಾರ್ಯದರ್ಶಿ ...ಮಂಡಳಿ ಹೇಳಿದೆ.

ಇತ್ತೀಚೆಗೆ ರಾಜ್ಯ ಸರ್ಕಾರವು ಸರ್ಕಾರಿ ಬಸ್ ಪ್ರಯಾಣದರಗಳನ್ನು ವಿಪರೀತವಾಗಿ ಏರಿಸಿರುವುದರ ವಿರುದ್ಧ ರಾಜ್ಯವ್ಯಾಪಿ ಚಳುವಳಿ ಹೂಡಲು ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಕರೆ ನೀಡಿರುತ್ತದೆ. ಮೇ ೧೬ ರಂದು ಬೆಲೆ ಏರಿಕೆಯ ವಿರುದ್ಧ ನಡೆಯಲಿರುವ ಪ್ರತಿಭಟನೆಯ ಸಂದರ್ಭದಲ್ಲಿ ಬಸ್ ಪ್ರಯಾಣದರ ಏರಿಕೆಯನ್ನು ಸಹ ಇಳಿಸುವಂತೆ ಒತ್ತಾಯಿಸಲು ಸಿ.ಪಿ.ಐ(ಎಂ) ಮತ್ತು ಸಿ.ಪಿ.ಐ ರಾಜ್ಯ ಘಟಕಗಳ ಪರವಾಗಿ ಈಗಾಗಲೇ ಜಂಟಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಲಾಗಿದೆ.

ಸಿ.ಪಿ.ಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಈಗಾಗಲೇ ಹೋರಾಟದ ಕಣದಲ್ಲಿ ಧುಮುಕಿದೆ. ದರ ಏರಿಕೆಯ ಕುರಿತ ಪ್ರಕಟಣೆ ಪತ್ರಿಕೆಗಳಲ್ಲಿ ಹೊರ ಬಿದ್ದ ಕೂಡಲೇ ದಿ: ೬-೫-೯೦ ರಂದು ಮಧ್ಯಾಹ್ನ ೧೨ ಗಂಟೆಗೆ ಶ್ರೀರಾಮಪುರದ ದೇವಯ್ಯ ಪಾರ್ಕ್ ಬಳಿ ಡಿ.ವೈ.ಎಫ್.ಐ. ನೇತೃತ್ವದಲ್ಲಿ ಪಿಕೆಟಿಂಗ್ ನಡೆಸಿದರೆ ದಿ: ೮-೫-೯೦ ರಂದು ಸಂಜೆ ೪ ಗಂಟೆಗೆ ಯಶವಂತಪುರ ವೃತ್ತದ ಬಳಿ ಸಿ.ಪಿ.ಐ(ಎಂ) ಕಾರ್ಯಕರ್ತರು ರಸ್ತೆ ತಡೆ ಚಳುವಳಿ ಹೂಡಿದರು. ಇದೀಗ ದಿ: ೧೧-೫-೯೦ ರಂದು ಕೇಂದ್ರ ಬಸ್ ನಿಲ್ದಾಣದ ಬಳಿ ಪಿಕೆಟಿಂಗ್ ನಡೆಸಲು ಪಕ್ಷದ ಜಿಲ್ಲಾ ಸಮಿತಿಯು ಈಗಾಗಲೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತದೆ. ಇದಾದ ಬಳಿಕವೂ ನಗರದ ವಿವಿಧ ಬಡಾವಣೆಗಳಲ್ಲಿ ಸ್ಥಳೀಯವಾಗಿಯೂ ಸಹ ಪಿಕೆಟಿಂಗ್ ಚಳುವಳಿ ಮುಂದುವರಿಸಲು ನಿರ್ಧರಿಸಲಾಗಿದೆ. ಜನತೆಯ ಜ್ವಲಂತ ಸಮಸ್ಯೆಯ ಕುರಿತು ಸಿ.ಪಿ.ಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಶೀಘ್ರ ಕಾರ್ಯಾಚರಣೆಗೆ ಇಳಿದಿರುವುದು ಪ್ರಶಂಸನೀಯ. ಪಕ್ಷದ ಸಕಾಲಿಕ ಪ್ರತಿಭಟನೆಗೆ ನಾಗರೀಕರಿಂದ ಬಹಳ ಉತ್ಸಾಹ ಪೂರ್ಣ ಪ್ರತಿಕ್ರಿಯೆ ಮತ್ತು ಸಹಾನುಭೂತಿ ಕಂಡು ಬಂದಿರುವುದು ಗಮನಾರ್ಹವಾಗಿದೆ.

ಪಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಏರಿಕೆಯ ನೆಪವೊಡ್ಡಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ನಗರ ಸಾರಿಗೆ ಬಸ್ ಪ್ರಯಾಣದರಗಳನ್ನು ಸರ್ಕಾರವು ವಿಪರೀತವಾಗಿ ಏರಿಸಿರುವುದು ಸರ್ವಥಾ ಖಂಡನೀಯವಾಗಿದೆ. ಕೆ.ಎಸ್.ಆರ್.ಟಿ.ಸಿ. ಪ್ರಯಾಣದರಗಳನ್ನು ಸುಮಾರು ಶೇ. ೨೫ರಿಂದ ೩೩ ರಷ್ಟು ಏರಿಸಲಾಗಿದೆ. ಬೆಂಗಳೂರು ನಗರ ಸಾರಿಗೆ ಪ್ರಯಾಣ ದರಗಳನ್ನಂತೂ ಶೇ. ೧೦೦ ರಷ್ಟು ಹೆಚ್ಚಿಸಲಾಗಿತ್ತು. ಆದರೆಸಾರ್ವಜನಿಕರಲ್ಲಿ ಉಂಟಾದ ತೀವ್ರ ಅಸಮಾಧಾನದಿಂದ ಬೆಚ್ಚಿದ ಸರ್ಕಾರ ನಂತರ ಬಿ.ಟಿ.ಎಸ್. ದರಗಳನ್ನು ಸ್ವಲ್ಪ ಮಟ್ಟಿಗೆ ಇಳಿಸಿರುವುದಾಗಿ ಪ್ರಕಟಿಸಲಾಗಿದೆ. ಈಗಲೂ ಸಹ ಶೇ. ೫೦ಕ್ಕಿಂತ ಅಧಿಕ ಹೆಚ್ಚಳದ ಹೊರೆ ಬೆಂಗಳೂರು ನಾಗರೀಕರ ಮೇಲೆ ಹೇರಲಾಗಿದೆ. ಕನಿಷ್ಠ ದರ ೫೦ ಪೈಸೆಯಿಂದ ೭೫ ಪೈಸೆಗಳಿಗೆ ಏರಿಸಲಾಗಿದೆ. ಪ್ರತಿ ಸ್ಟೇಜಿಗೆ ೨೫ ಪೈಸೆಗಳಷ್ಟು ಹೆಚ್ಚಳವಾಗಿದೆ. ಇದರಿಂದಾಗಿ ಸರ್ಕಾರಿ ಬಸ್ ಪ್ರಯಾಣ ಆಟೋರಿಕ್ಷಾ ಅಥವಾ ಟ್ಯಾಕ್ಸಿ ಪ್ರಯಾಣದಷ್ಟೇ ದುಬಾರಿಯಾಗಿ ಪರಿಣಮಿಸಿದೆ. ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯ ಅದಕ್ಷತೆ ಮತ್ತು ಭ್ರಷ್ಟಾಚಾರವನ್ನು ನಿಯಂತ್ರಿಸುವಬದಲು ಸರ್ಕಾರವು ನಷ್ಟದ ಕಾರಣವನ್ನೊಡ್ಡಿ ತನ್ನದುರಾಡಳಿತದ ಹೊರೆಯನ್ನು ಪ್ರಯಾಣಿಕರ ಮತ್ತು ಜನ ಸಾಮಾನ್ಯರ ತಲೆಯ ಮೇಲೆ ಸುಲಭವಾಗಿ ವರ್ಗಾಯಿಸಲು ಹೊರಟಿರುವುದು ಸಂಪೂರ್ಣವಾಗಿಅಸಮರ್ಥನೀಯವಾಗಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶಗಳು ಹೊರಬಿದ್ದ ಒಂದು ವಾರದಲ್ಲೇ ಪ್ರಯಾಣದರ ಏರಿಕೆಯ ಕ್ರಮ ಕಾಂಗ್ರೆಸ್(ಐ) ಸರ್ಕಾರದ ಜನ ವಿರೋಧಿ ಸ್ವರೂಪವನ್ನು ಸ್ಪಷ್ಟವಾಗಿ ಬಯಲಿಗೆಳೆದಿದೆ. ಸರ್ಕಾರದ ಈ ಕುತಂತ್ರ ಕರ್ನಾಟಕದ ಜನತೆಗೆ ಬಗೆದ ಮಹಾದ್ರೋಹವಾಗಿದೆ. ಮತದಾರರ ಬೆನ್ನಿಗೆ ಚೂರಿಹಾಕಿ ಅಪಮಾನಗೊಳಿಸಿರುವ ವೀರೇಂದ್ರ ಪಾಟೀಲ್ ಸರ್ಕಾರದ ಗೋಸುಂಬಿತನ ಬಯಲಾಗಿದೆ. ಕಾಂಗ್ರೆ ಸರ್ಕಾರದ ಜನ ವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಲು ಸಮಸ್ತ ಜನತೆಯನ್ನು ಅಣಿನೆರಸಿ ರಾಜ್ಯದಾದ್ಯಂತ ಪರಿಣಾಮಕಾರಿಯಾದ ಚಳುವಳಿಯನ್ನು ಹೂಡಬೇಕಾಗಿದೆ.

ಯಶವಂತಪುರ:

ಬಸ್ ದರ ಏರಿಕೆ ವಿರುದ್ಧ ಪಿಕೆಟಿಂಗ್

ಸಿ.ಪಿ.ಐ(ಎಂ) ಯಶವಂತಪುರ ಶಾಖೆಯ ನೇತೃತ್ವದಲ್ಲಿ ದಿ: ೮-೫-೯೦ ರಂದು ಸಂಜೆ ೪-೩೦ ಗಂಟೆಗೆ ಯಶವಂತಪುರ ವೃತ್ತದಲ್ಲಿ ಪಕ್ಷದ ಕಾರ್ಯಕರ್ತರು ದಿಢೀರನೆ ರಸ್ತೆ ತಡೆ ಚಳುವಳಿ ಹೂಡಿದರು. ಬಸ್ ಪ್ರಯಾಣದರ ಏರಿಕೆಯ ವಿರುದ್ಧ ಹಮ್ಮಿಕೊಳ್ಳಲಾಗಿದ್ದ ಈ ಪ್ರತಿಭಟನೆ ಅನಿರೀಕ್ಷಿತವಾಗಿದ್ದರಿಂದ ಪೋಲೀಸರು ಕಕ್ಕಾಬಿಕ್ಕಿಯಾದರು. ಸುಮಾರು ಅರ್ಧ ಗಂಟೆಯ ಕಾಲ ತುಮಕೂರು ರಸ್ತೆಯ ವಾಹನ ಸಂಚಾರ ಸ್ತಬ್ಧಗೊಂಡಿತು.

ಜನತೆಯ ಮೇಲೆ ಕಾಂಗ್ರೆಸ್(ಐ) ಸರ್ಕಾರದ ನಗ್ನ ಧಾಳಿಯನ್ನು ಖಂಡಿಸಲು ಬೀದಿಗಿಳಿದ ಸಿ.ಪಿ.ಐ(ಎಂ) ಪ್ರದರ್ಶನಕಾರರ ಸುತ್ತ ಕೆಲವೇ ನಿಮಿಷಗಳಲ್ಲಿ ನೂರಾರು ಸಂಖ್ಯೆಯಲ್ಲಿ ನಾಗರೀಕರು ಅಣಿನೆರೆದರು. ಸಾರ್ವಜನಿಕರ ಸಹಾನುಭೂತಿ ಕಾರ್ಯಕರ್ತರಲ್ಲಿ ಮತ್ತಷ್ಟು ಉತ್ಸಾಹ ಮೂಡಿಸಿತು. ಸನಿಹದಲ್ಲೇ ಪೋಲೀಸ್ ಠಾಣೆ ಇದ್ದರೂ ಚಳುವಳಿಕಾರರನ್ನು ಬಂಧಿಸಲು ವ್ಯಾನ್ ಇಲ್ಲವಾದ ಕಾರಣ ಜೀಪಿನಲ್ಲೇ ತುಂಬಿಕೊಂಡು ಹೋಗಬೇಕಾಯಿತು. ಸಿ.ಪಿ.ಐ(ಎಂ) ರಾಜ್ಯ ಸಮಿತಿ ಸದಸ್ಯ ಎಸ್.ಆರ್. ಆರಾಧ್ಯ, ಯಶವಂತಪುರ ಶಾಖೆ ಕಾರ್ಯದರ್ಶಿ ಕಾಂ॥ಸುಬ್ಬಯ್ಯ, ಸಿ.ಐ.ಟಿ.ಯು. ನಾಯಕರಾದ ಕಾಂ॥ ಮಾರ್ತಾಂಡಪ್ಪ, ಮೈಸೂರು ಲ್ಯಾಂಪ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರಾದ ಕಾಂ। ಶ್ರೀನಿವಾಸ್ ಮತ್ತು ಪ್ರಧಾನಕಾರ್ಯದರ್ಶಿ ಕಾಂ। ಪ್ರಭಾಕರ್ ಸೇರಿದಂತೆ ಒಟ್ಟು ೩೨ ಮಂದಿ ಕಾರ್ಯಕರ್ತರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು.

ಡಿ.ವೈ.ಎಫ್.ಐ. ಪಿಕೆಂಟಿಂಗ್, ಬಂಧನ

೬-೫-೯೦ರ ಮಧ್ಯಾಹ್ನ ಬೆಂಗಳೂರು ನಗರದ ದೇವಯ್ಯ ಪಾರ್ಕ್ ಬಳಿ ಡಿ.ವೈ.ಎಫ್.ಐ. ಸಂಘಟನೆಯ ಸುಮಾರು ೭೫ ಜನ ಕಾರ್ಯಕರ್ತರು ಕಾಂಗ್ರೆ ರಾಜ್ಯ ಸರ್ಕಾರದ ಹಠಾತ್ ಬಸ್‌ದರ ವಿರೋಧಿಸಿ ಬಿ.ಟಿ.ಎಸ್. ಬಸ್‌ಗಳನ್ನು ರಸ್ತೆಗಳಲ್ಲಿ ಅಡ್ಡಗಟ್ಟಿ ಪಿಕೇಟಿಂಗ್ ನಡೆಸಿದರು. ಹತ್ತಾರು ಬಸ್‌ಗಳು ಹಾಗೂ ಇತರ ನೂರಾರು ವಾಹನಗಳು ಒಂದು ಗಂಟೆಯ ಕಾಲ ನಿಲುಗಡೆಯಾಗಿದ್ದುವು.

ಪಿಕೆಟಿಂಗ್ ಕಾರ್ಯಕ್ರಮದ ನೇತೃತ್ವವನ್ನು ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ, ಜಿಲ್ಲಾ ಸಮಿತಿಯ ಅಧ್ಯಕ್ಷ ಶ್ರೀನಿವಾಸ್, ಸಹಕಾರ್ಯದರ್ಶಿ ಗೋಪಾಲಕೃಷ್ಣ ವಹಿಸಿದ್ದರು.

ಶಾಂತಿಯುತವಾಗಿ ಪಿಕೇಟಿಂಗ್ ನಡೆಸುತ್ತಿದ್ದ ಕಾರ್ಯಕರ್ತರನ್ನು ಮಲ್ಲೇಶ್ವರಂ ಪೋಲಿಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಕುಂದಾಪುರ ಪುರಸಭೆ:

ಸಿ.ಪಿ.ಐ(ಎಂ)ಗೆ ಅತ್ಯಧಿಕ ಮತ

ಕುಂದಾಪುರ, ಪುರಸಭೆಯ ಚುನಾವಣೆಯಲ್ಲಿ ೪ ನೇ ಡಿವಿಜನಿನಿಂದ (೮-೯ನೇ ವಾರ್ಡ್)ಸ್ಪರ್ಧಿಸಿದ್ದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಐವರೂ ಅಭ್ಯರ್ಥಿಗಳು ಇತರೆಲ್ಲ ಕ್ಷೇತ್ರಗಳ ಅಭ್ಯರ್ಥಿಗಳಿಗಿಂತ ಹೆಚ್ಚು ಮತಗಳನ್ನು ಗಳಿಸಿದ್ದಾರಲ್ಲದೆ ಕಾಂ. ವಿ. ನರಸಿಂಹ ಅವರು ೨೦೮೬ ಮತಗಳನ್ನು ಗಳಿಸಿ ದಾಖಲೆ ಸ್ಥಾಪಿಸಿದ್ದಾರೆ. ಸಿ.ಪಿ.ಎಂ.ನ ಐವರೂ ಅಭ್ಯರ್ಥಿಗಳು ಒಂದೂವರೆ ಸಾವಿರಕ್ಕಿಂತ ಹೆಚ್ಚು ಮತ ಪಡೆದಿದ್ದು ವಿವರ ಕೆಸಗಿನಂತಿದೆ.

ಕಾಂ. ಅಬ್ರಾಹಂ ಕರ್ಕಡ್-೧೯೩೬, ವಿ. ಆನಂದ-೧೯೨೩, ಟಿ. ಗುಲಾಬಿ-೧೮೪೫, ವಿ. ನರಸಿಂಹ-೧೦೮೬, ವಿ.ಎಂ. ನಾರಾಯಣ-೧೭೫೨.

ಕಂದಾಪುರ ಪುರಸಭೆಯಲ್ಲಿ ಐದು ಸ್ಥಾನಗಳನ್ನು ಗಳಿಸಿರುವ ಸಿ.ಪಿ.ಐ(ಎಂ). ಎರಡನೇ ದೊಡ್ಡ ಪಕ್ಷವಾಗಿ ಮೂಡಿ ಬಂದಿದೆ.

ಪುರಸಭೆಗೆ ಐವರು ಸಿ.ಪಿ.ಐ.(ಎಂ) ಸದಸ್ಯರನ್ನು ಅತ್ಯಧಿಕ ಮತಗಳಿಂದ ಆಯ್ಕೆ ಮಾಡಿದ ೪ನೇ ಡಿವಿಜನ್‌ನ ಮತದಾರರಿಗೆ ಹಾಗೂ ಇತರ ಡಿವಿಜನ್‌ಗಳಲ್ಲಿ ಸ್ಪರ್ಧಿಸಿದ್ದ ಪಕ್ಷದ ೧೨ ಅಭ್ಯರ್ಥಿಗಳಿಗೆ ಮತಕೊಟ್ಟು ಸಹಕರಿಸಿದ ಮತದಾರರಿಗೂ ಚುನಾವಣಾ ಕಾರ್ಯದಲ್ಲಿ ದುಡಿದ ಕಾರ್ಯಕರ್ತರಿಗೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕುಂದಾಪುರ ತಾಲೂಕು ಸಮಿತಿ ಕೃತಜ್ಞತೆ ಸಲ್ಲಿಸಿದೆ.

ತಾನು ಆಯ್ಕೆಯಾಗಿರುವ ಪ್ರದೇಶ ಮಾತ್ರವೆ ಅಲ್ಲದೆ ಇಡೀ ಪುರಸಭಾ ವ್ಯಾಪ್ತಿಯ ಜನರ ಒಳಿತಿಗಾಗಿ ಶಕ್ತಿಮೀರಿ ಶ್ರಮಿಸುವುದಾಗಿ, ಅಗತ್ಯ ಬಿದ್ದಲ್ಲಿ ಚಳವಳಿಯನ್ನೂ ನಡೆಸುವುದಾಗಿ ಸಿ.ಪಿ.ಎಂ. ಭರವಸೆ ನೀಡಿದೆ.

(ಕೃಪೆ : ಉದಯವಾಣಿ)

ಪುರಸಭಾ ಚುನಾವಣೆಗಳಲ್ಲಿ

ರಾಜ್ಯದಲ್ಲಿ ನಡೆದ ಪುರಸಭಾ ...ನಾವಣೆಗಳಲ್ಲಿ ಸಿ.ಪಿ.ಐ.(ಎಂ) ವಿವಿಧೆಡೆ ...ತಿದ ಸ್ಥಾನಗಳ ವಿವರಗಳು ...ರೆಯುತ್ತಿವೆ. ಕೆಲವು ಇಲ್ಲಿವೆ.

...ದಾಪುರ	- 5
...ಂಡೇಲಿ	- 3 ಮತ್ತು ಒಬ್ಬರು ಬೆಂಬಲಿತ
...ಕಿಗಲ್	- 2
...ಂಗಳೂರು	- 1
...ಾ	- 1
...ಟ್ಕಾಳ	- 1
...ಮಕೂರು	- ಒಬ್ಬರು ಬೆಂಬಲಿತ ಅಭ್ಯರ್ಥಿ

ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ವಿಸ್ತರಣೆ

ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ಇತ್ತೀಚಿನ ಸಭೆ ಕಾಂ. ಪಿ.ಕೆ. ಸುಬ್ರಮಣಿ ಹಾಗೂ ಕಾಂ. ಎಸ್. ರೇವಣ್ಣ ಇವರನ್ನು ಕಾರ್ಯದರ್ಶಿ ಮಂಡಳಿಗೆ ಆರಿಸಿದೆ.

ಮೇ 21 ರಂದು ಬಸ್ ಪ್ರಯಾಣದರ ಏರಿಕೆ ವಿರೋಧಿಸಿ ಮತ್ತು ರೈತರ ಸಾಲ ಮನ್ನಾ ಒತ್ತಾಯಿಸಿ ರಾಜ್ಯ ವ್ಯಾಪಿ ಧರಣಿ ಮುಷ್ಕರಕ್ಕೆ ಜನತಾ ದಳ, ಸಿ.ಪಿ.ಐ(ಎಂ), ಸಿ.ಪಿ.ಐ. ಮತ್ತು ಜನತಾ ಪಕ್ಷಗಳ ಜಂಟಿ ಕರೆಯನ್ನು ಯಶಸ್ವಿಗೊಳಿಸಿ.



ಹೊ ಚಿ ಮಿನ್ಹ್

ವಿಮೋಚನಾ ಹೋರಾಟದ, ಸೈದ್ಧಾಂತಿಕ ಅಚಲ ವಿಶ್ವಾಸದ ಪ್ರತೀಕ

ಈ ವರ್ಷದ ಮೇ ೧೯ ಮಹಾನ್ ಕಮ್ಯುನಿಸ್ಟ್ ಮುಂದಾಳು ಹೊ ಚಿಮಿನ್ಹ್‌ರ ಜನ್ಮ ಶತಾಬ್ಧಿ ದಿನ. ಇದನ್ನು ಅತ್ಯಂತ ಯೋಗ್ಯ ರೀತಿಯಲ್ಲಿ ಆಚರಿಸಬೇಕೆಂದು ಸಿ.ಪಿ.ಐ. (ಎಂ) ಪೊಲಿಟ್ ಬ್ಯುರೋ ಸಮಸ್ತ ಪಕ್ಷಕ್ಕೆ ಕರೆ ನೀಡಿದೆ. ಎಪ್ರಿಲ್ ೨೨ ರಿಂದ ೨೯ರ ವರೆಗೆ ದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್ ಬ್ಯುರೋ ಈ ಮಹಾನ್ ಕ್ರಾಂತಿಕಾರಿಗೆ ಧೀರ ನಮನ ಅರ್ಪಿಸುವ ಒಂದು ನಿರ್ಣಯವನ್ನು ಅಂಗೀಕರಿಸಿತು. ಹೊ ಚಿ ಮಿನ್ಹ್‌ರ ಕ್ರಾಂತಿಕಾರಿ ಜೀವನದ ಸಾಧನೆ, ಕೊಡುಗೆಗಳ ಒಂದು ಸ್ಥೂಲ ಚಿತ್ರಣ ನೀಡುವ ಈ ನಿರ್ಣಯದ ಅನುವಾದ ಇದು.

ಈ ವರ್ಷದ ಮೇ ೧೯ ಸುವಿಖ್ಯಾತ ಕಮ್ಯುನಿಸ್ಟ್ ಮುಂದಾಳು ಹೊ ಚಿ ಮಿನ್ಹ್‌ರವರ ಜನ್ಮ ಶತಾಬ್ಧಿ ದಿನ. ವಿಯೆಟ್ನಾಂ ಮಾತ್ರವಲ್ಲ ಮಾಜಿ ವಸಾಹತುಗಳ, ಜನಗಳ ಸಾಮಾಜಿಕ ಮತ್ತು ರಾಜಕೀಯ ಉದ್ಧಾರದ ಧೀರ ಹೋರಾಟಗಳೊಂದಿಗೆ ಬೆಸೆದ ಹೆಸರು ಅವರದ್ದು. ಅವರ ಜೀವನ ಮತ್ತು ಕೃತಿ ಹೋರಾಟದ, ತ್ಯಾಗದ, ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ಅಚಲವಿಶ್ವಾಸದ ಶಕ್ತಿಯ ಒಂದು ಮಹಾಕಾವ್ಯ. ಕಮ್ಯುನಿಸ್ಟ್‌ರ, ಸ್ವಾತಂತ್ರ್ಯಪ್ರಿಯ ಜನತೆಯ ಹಲವಾರು ಪೀಳಿಗೆಗಳಿಗೆ ಅದು ಸದಾ ಒಂದು ಸ್ಫೂರ್ತಿಯ ಸೆಲೆ.

ಹೊ ಚಿ ಮಿನ್ಹ್ ಮಧ್ಯ ವಿಯೆಟ್ನಾಂನಲ್ಲಿ ಒಂದು ಸುಶಿಕ್ಷಿತ ಕುಟುಂಬದಲ್ಲಿ ಹುಟ್ಟಿದರು. ಅವರ ಬಾಲ್ಯದ ಹೆಸರು ನ್ಗಾಯೆನ್ ಸಿನ್ಹ್ ಚುಂಗ್ (ಮುಂದೆ ಅವರು ಇನ್ನೂ ಕೆಲವಾರು ಹೆಸರುಗಳನ್ನು ಇಟ್ಟುಕೊಳ್ಳಬೇಕಾಯಿತು). ವಿಯೆಟ್ನಾಂನ ಊಳಿಗಮಾನ್ಯ ಪ್ರಭುಗಳು ಮತ್ತು ಫ್ರೆಂಚ್ ವಸಾಹತುಶಾಹಿಗಳು ನಿರ್ದಯವಾಗಿ ದೇಶಪ್ರೇಮೀ ಹೋರಾಟಗಳನ್ನು ಹತ್ತಿಕ್ಕುತ್ತಿದ್ದ ವಾತಾವರಣದಲ್ಲಿ ಬೆಳೆದವರು ಅವರು. ೧೯೧೧ ರಲ್ಲಿ ಶಿಕ್ಷಣ ನಿಲ್ಲಿಸಬೇಕಾಗಿ ಬಂದ ಹೊ ಚಿ ಮಿನ್ಹ್ ಒಂದು ಫ್ರೆಂಚ್ ಹಡಗಿನಲ್ಲಿ ಅಡಿಗೆಯವನಾಗಿ ಸೇರಿ ದೇಶ ಬಿಟ್ಟುಹೊರಟರು. ಯುರೋಪಿನಾದ್ಯಂತ ಹಾಗೂ ಅಮೆರಿಕಾದಲ್ಲಿ ತಿರುಗಾಡಿದರು ಪೂರ್ಣ 13 ವರ್ಷ ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಹೇಗೆ ಕಾರ್ಮಿಕವರ್ಗವನ್ನು, ಜನತೆಯನ್ನು ಶೋಷಿಸುತ್ತವೆ ಎಂಬುದರ ಪ್ರತ್ಯಕ್ಷ ಅರಿವು ಗಳಿಸಿದರು. ಈ ದೇಶಗಳ ಜನಗಳ ವಿವಿಧ ಹೋರಾಟಗಳಲ್ಲಿ ಸೇರಿಕೊಂಡರು. 1917 ರಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿ ವಿಶ್ವವನ್ನು ನಡುಗಿಸಿದಾಗ ಅವರು ಫ್ರಾನ್ಸಿಗೆ ಹೋದರು. ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದರು. ಲೆನಿನ್ನರ ಮೂರನೇ ಅಂತರ್ರಾಷ್ಟ್ರೀಯವನ್ನು ಆರಿಸಿಕೊಂಡರು. ವಸಾಹತುಗಳಿಂದ ಬಂದ ಇತರ ಕ್ರಾಂತಿಕಾರಿಗಳಿಗಳೊಂದಿಗೆ 1924ರಲ್ಲಿ ಅಂತರರಾಷ್ಟ್ರೀಯ ಸಂಘದ ಮುಖವಾಣಿಯನ್ನು ಸ್ಥಾಪಿಸಿ ಅದರ ಸಂಪಾದಕರಾದರು. ಕೋಮಿಂಟರ್ನ್‌ನ 5ನೇ ಮಹಾಧಿವೇಶನದಲ್ಲಿ ಅವರು ಫ್ರೆಂಚ್‌ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿ ಭಾಗವಹಿಸಿದರು. ಅಲ್ಲಿ ಅವರಿಗೆ ಕೋಮಿಂಟರ್ನ್‌ನ ದಕ್ಷಿಣ ಕಚೇರಿಯ ಮುಖ್ಯಸ್ಥರ ಕೆಲಸ ಒಪ್ಪಿಸಲಾಯಿತು.

ಅವರ ಯುರೋಪ್, ಅಮೆರಿಕಾ ಪ್ರವಾಸ ಕಾಲದಲ್ಲಿ ಜಗತ್ತಿನಲ್ಲಿ ಮಹತ್ವದ ಬೆಳವಣಿಗೆಗಳು ನಡೆಯುತ್ತಿದ್ದವು. ಇದು ಪ್ರಭಾವ ಬೀರಿದ್ದವು. ಅವರನ್ನು ಮಾರ್ಕ್ಸ್‌ವಾದದತ್ತ ಸೆಳೆದಿದ್ದವು. "ದೇಶೀ ಮತ್ತು ವಸಾಹತು ಪ್ರಶ್ನೆ" ಕುರಿತು ಲೆನಿನ್ನ್‌ರ ಮಹಾಪ್ರಬಂಧ ಅವರ ಪ್ರಜ್ಞೆಯನ್ನು ಮುಂದೆಂದೂ ಹಿಂತಿರುಗಿ ನೋಡದಂತೆ ಕಡೆದುರೂಪಿಸಿತು. ವಸಾಹತುಶಾಹೀ ಆಳ್ವಿಕೆಯಿಂದ ವಿಯೆಟ್ನಾಂನ ವಿಮೋಚನೆಯ ಹೋರಾಟಕ್ಕಾಗಿ ಮಾತ್ರವಲ್ಲ, ಅದರ ಸಾಮಾಜಿಕ ಪರಿವರ್ತನೆಯ ಹೋರಾಟಕ್ಕಾಗಿ ಕೂಡ, ಪ್ಯಾರಿಸ್‌ನಲ್ಲಿ ಅವರ ಜೀವನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ವರೂಪದ ಕ್ರಾಂತಿಕಾರಿ ರಣನೀತಿಯನ್ನು ರೂಪಿಸಿತು.

1924 ರಲ್ಲಿ ಅವರು ಚೀಣಾಕ್ಕೆ ಬಂದು ವಿಯೆಟ್ನಾಂನಿಂದ ವಲಸೆ ಬಂದ ಯುವಕರಿಗೆ ತರಬೇತಿ ನೀಡಿ ವಿಯೆಟ್ನಾಂನಲ್ಲಿ ಕ್ರಾಂತಿಕಾರಿ ಹೋರಾಟಕ್ಕೆ ಸಿದ್ಧತೆ ಆರಂಭಿಸಿದರು. ಅದೇ ವೇಳೆಗೆ ಕ್ರಾಂತಿಯ ಧ್ಯೇಯದ ಪ್ರತಿಪಾದನೆಗೆಂದು ಒಂದು ಪತ್ರಿಕೆಯನ್ನು ಆರಂಭಿಸಿದರು.

ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ

1927 ರಲ್ಲಿ ಮಾಸ್ಕೋಗೆ ಹೋಗಿ ತನ್ನ ಮಹಾಪ್ರಬಂಧ "ಹಳ್ಳಿಗಾಡಿನಲ್ಲಿ ಪಕ್ಷದ ಮಿಲಿಟರಿ ಕೆಲಸ" ಬರೆದರು. 'ಸಾಮ್ರಾಜ್ಯಶಾಹಿ - ವಿರೋಧಿ ಸಂಘ' ಸ್ಥಾಪಿಸಿದರು. ನಂತರ ಯುರೋಪಿನ ಇತರ ದೇಶಗಳಿಗೆ, ಶ್ರೀಲಂಕಾ ಮತ್ತು ಥಾಯಿಲೇಂಡ್‌ಗೂ ಭೇಟಿಯಿತ್ತರು. 1930ರಲ್ಲಿ ಹಾಂಗ್‌ಕಾಂಗ್‌ನಲ್ಲಿ ಎಲ್ಲಾ ವಿಯೆಟ್ನಾಂ ಕ್ರಾಂತಿಕಾರಿಗಳ ಒಂದು ಸಮ್ಮೇಳನ ಕರೆದರು. ಇದು ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗೆ ಹಾದಿ ಮಾಡಿದ ಸಮ್ಮೇಳನ. ಹಾಂಗ್‌ಕಾಂಗ್‌ನಲ್ಲಿ ಅವರನ್ನು ಬಂಧಿಸಲಾಯಿತು. ಬಿಡುಗಡೆಯ ನಂತರ ಅವರು ಮಾಸ್ಕೋದಲ್ಲಿ ಕಮ್ಯುನಿಸ್ಟ್ ಅಂತರಾಷ್ಟ್ರೀಯದ ೭ನೇ ಮಹಾಧಿವೇಶನದಲ್ಲಿ ಭಾಗವಹಿಸಿದರು. ವಿಯೆಟ್ನಾಮೀ ಕ್ರಾಂತಿಕಾರಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮದ ಜವಾಬ್ದಾರಿ ಹೊತ್ತರು. 1938 ರಲ್ಲಿ ಚೀಣಾಕ್ಕೆ ಹಿಂದಿರುಗಿ ಅಲ್ಲಿಂದ ಗುಪ್ತವಾಗಿ ಅಲ್ಲಿಂದ ಗುಪ್ತವಾಗಿ 1941 ರಲ್ಲಿ ವಿಯೆಟ್ನಾಂ ತಲುಪಿದರು. ಹೊ ಚಿ ಮಿನ್ಹ್ ಎಂಬ ಹೆಸರಿನಲ್ಲಿ ಅವರು ಈ ಗುಪ್ತಪ್ರಯಾಣ ಕೈಗೊಂಡರು. ನಂತರ ಈ ಹೆಸರು ವಿಮೋಚನೆಗಾಗಿ ಹೋರಾಡುತ್ತಿರುವ ಮಾನವಕುಲದ ಆಕಾಂಕ್ಷೆಗಳ ಪ್ರತೀಕವಾಯಿತು.

ಎಷ್ಟೇ ಬಂಧನಗಳನ್ನು ಎದುರಿಸಬೇಕಾದರೂ ಹಲವು ಬಾರಿ ತಲೆಮರೆಸಿಕೊಳ್ಳಬೇಕಾಗಿ ಬಂದರೂ ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ಅವರ ಅಚಲ ವಿಶ್ವಾಸ ಹಾಗೂ ನಿರ್ಧಾರ, ಅವನ್ನು ಕಾರ್ಯರೂಪಕ್ಕೆ ತರುವ ಅವರ ಅಚಲ ವಿಶ್ವಾಸ ಹಾಗೂ ನಿರ್ಧಾರ, ಅವನ್ನು ಕಾರ್ಯರೂಪಕ್ಕೆ ತರುವ ಅವರ ದೃಢ ನಿರ್ಣಯ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷವನ್ನು ಕ್ರಾಂತಿಕಾರಿ ಹೋರಾಟವನ್ನು ಸಂಘಟಿಸುವಲ್ಲಿ ಅವರಿಗೆ ಸ್ಫೂರ್ತಿಯ ಸೆಲೆಯಾಗಿತ್ತು. ವಿಯೆಟ್ನಾಮೀ ಕ್ರಾಂತಿ ಮತ್ತು ಇಂಡೋ ಚೀಣಾದ ಕ್ರಾಂತಿಗಳನ್ನು ವಿಶ್ವ ಕ್ರಾಂತಿಯ ಭಾಗವಾಗಿ ಅವರು ಕಂಡರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಧ್ಯೇಯಗಳನ್ನು ಪರಸ್ಪರ ಜೋಡಿಸುವುದನ್ನು ಒಂದು ಕ್ಷಣವೂ ಅವರು ಮರೆಯಲಿಲ್ಲ. ಅವರ ಮುಂದಾಳತ್ವದಲ್ಲಿ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ರೂಪಿಸಿದ ಕಾರ್ಯವ್ಯೂಹ ಮತ್ತುಕಾರ್ಯತಂತ್ರ ಎಷ್ಟೊಂದು ಸಮಂಜಸವಾಗಿತ್ತು ಎಂಬುದನ್ನು ವಿಯೆಟ್ನಾಂ ಹೋರಾಟದ ವಿಜಯ ತೋರಿಸಿಕೊಟ್ಟಿತು. ಕಾರ್ಮಿಕವರ್ಗ ಮತ್ತು ಅದರ ಮುಂಚೂಣಿ ಪಕ್ಷದ ನೇತೃತ್ವದಲ್ಲಿ ದೃಢ ರೈತ-ಕಾರ್ಮಿಕ ಸಖ್ಯತೆಯ ಆಧಾರದ ಮೇಲೆ ಇತರ ವಿಭಾಗಗಳೊಂದಿಗೆ ಸಂಯುಕ್ತ ರಂಗ ಬೆಸೆಯುವ ಕ್ರಾಂತಿಕಾರಿ ಹೋರಾಟದ ಮಾರ್ಗವನ್ನು ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ದೃಢವಾಗಿ ಎತ್ತಿ ಹಿಡಿಯಿತು.

ಒಂದು ಮಹಾನ್ ಗಾಥೆ

ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದ ಹದಿನೈದು ವರ್ಷಗಳ ನಂತರ ಫ್ಯಾಸಿಸ್ಟ್ ಜರ್ಮನಿಯ ಪರಾಭವ, ಜಪಾನಿನ ವಿರುದ್ಧ ಸೋವಿಯತ್ ಒಕ್ಕೂಟದ ಧಾಳಿ ಹೊ ಚಿ ಮಿನ್ಹ್ ಮತ್ತು ವಿಯೆಟ್ನಾಮೀ ಕಮ್ಯುನಿಸ್ಟ್‌ರು ಕಾದಿದ್ದ ಒಂದು ವಿಶ್ವ ಸನ್ನಿವೇಶವನ್ನು ಸೃಷ್ಟಿಸಿದವು. 1945 ರಲ್ಲಿ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ ಒಂದು ಸಮ್ಮೇಳನ ರಾಷ್ಟ್ರೀಯ ಮುಕ್ತಿಯ ಸಮಿತಿಯೊಂದನ್ನು ರಚಿಸಿತು. ಸಾರ್ವತ್ರಿಕ ಬಂಡಾಯಕ್ಕೆ ಕರೆ ನೀಡಿತು. ಹೊ ಚಿ ಮಿನ್ಹ್ ಜನರಲ್ ಗಿಯಾಪ್, ಲೆದುವಾನ್ ಮತ್ತಿತರ ಸುವಿಖ್ಯಾತ ಕ್ರಾಂತಿಕಾರರೊಂದಿಗೆ ಸೇರಿ ರಾಷ್ಟ್ರೀಯ ವಿಮೋಚನಾ ಸೇನೆ ಸಂಘಟಿಸಿ ಜಪಾನೀಯರಿಂದ ಅಧಿಕಾರ ಕಿತ್ತುಕೊಂಡರು. ಆಗಸ್ಟ್ 19 ರಂದು ವಿಮೋಚನಾ ಹೋರಾಟ ವಿಜಯಶಾಲಿಯಾಯಿತು. ಸೆಪ್ಟೆಂಬರ್ 2 ರಂದು ಹೊ ಚಿ ಮಿನ್ಹ್ ತಾತ್ಕಾಲಿಕ ಸರಕಾರದ ಮುಖ್ಯಸ್ಥರಾದರು ಆದರೆ ಫ್ರೆಂಚ್ ಸಾಮ್ರಾಜ್ಯಶಾಹಿಗಳುಮತ್ತೆ ವಿಯೆಟ್ನಾಂನ್ನು ವಸಾಹತುವಾಗಿ ಮಾಡುವ ಹಂಚಿಕೆಯಲ್ಲಿದ್ದರು. ಫಲವಾಗಿ ಒಂದು ದೀರ್ಘ, ಕಟು ಹೋರಾಟ ನಡೆಯಿತು. ಅಂತಿಮವಾಗಿ 1954ರಲ್ಲಿ ಧೀರ ದೀನ್ ಬಿನ್ ಫು ಸಮರದಲ್ಲಿ ಫ್ರೆಂಚ್‌ಪಡೆಗಳು ಸಂಪೂರ್ಣವಾಗಿ ಸೋತವು. ಉತ್ತರ ವಿಯೆಟ್ನಾಂನ ವಿಮೋಚನೆ ಮತ್ತು ಒಂದು ಸಮಾಜವಾದಿ ಗಣತಂತ್ರದ ಸ್ಥಾಪನೆಯೇ ಕ್ರಾಂತಿಕಾರಿ ಧೀರತೆಯ, ಮಿಲಿಟರಿ ಚಾಕಚಕ್ಯತೆಯ, ವರ್ಗಶೋಷಣೆಯ ವಿರುದ್ಧ ವಿಜಯದ ಬಗ್ಗೆ ದೃಢ ವಿಶ್ವಾಸದ ಒಂದು ದೊಡ್ಡ ಗಾಥೆಯೇ ಸರಿ.

ಇಪ್ಪತ್ತು ವರ್ಷಗಳ ಕಾಲ ವಿಯೆಟ್ನಾಮೀ ಜನತೆ ತಮ್ಮ ದೇಶದ ದಕ್ಷಿಣ ಭಾಗದಲ್ಲಿ ಅಮೆರಿಕಾದ ಅತಿಕ್ರಮಣದ ವಿರುದ್ಧ ಜೀವನ್ಮರಣ ಹೋರಾಟ ನಡೆಸಬೇಕಾಯಿತು. ಪ್ರತಿರೋಧದ ಈ ಮಹಾನ್ ಹೋರಾಟ ವಿಶ್ವಾದ್ಯಂತ ಶೋಷಿತ ಜನಗಳ ಆಕಾಂಕ್ಷೆಗಳ ಪ್ರತೀಕವಾಯಿತು. ಸೌಹಾರ್ದ ಆಂದೋಲನಗಳ-ಅಲೆಗಳನ್ನೇ ಎಬ್ಬಿಸಿದ, ವಿಯೆಟ್ನಾಂ ನೆಲದ ಹೊರಗಿನ ಹಲವಾರು ಕ್ರಾಂತಿಕಾರಿಗಳಿಗೂ ಸ್ಫೂರ್ತಿ ನೀಡಿದ ಹೋರಾಟವದು. ವಿಮುಕ್ತಿಗಾಗಿ ಒಂದು ಶೋಷಿತ ಜನತೆಯ ಅದಮ್ಯ ಚೇತವನ್ನು ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯಶಾಹಿ ಸೇನೆ ಕೂಡಾ ಹತ್ತಿಕ್ಕಲು ಸಾಧ್ಯವಿಲ್ಲ ಎಂಬುದನ್ನು ಜಗತ್ತಿಗೇ ತೋರಿಸಿಕೊಟ್ಟ ಹೋರಾಟವದು. ಈ ಧೀರ ಹೋರಾಟದ, ವಿಶ್ವ ಮಟ್ಟದಲ್ಲಿ ವರ್ಗ ಶಕ್ತಿಗಳ ಬಲಾ ಬಲವನ್ನು ಬದಲಿಸುವಲ್ಲಿ ವಿಶೇಷ ಕಾಣಿಕೆ ನೀಡಿದ ಈ ಹೋರಾಟದ ನೇತೃತ್ವ ವಹಿಸಿದ್ದವರು ಹೊ ಚಿ ಮಿನ್ಹ್.

ಹಮಾರನಾಮ್ ತುಮ್ಹಾರನಾಮ್ ವಿಯೆಟ್ನಾಂ"

1958 ರಲ್ಲಿ ಹೊ ಚಿ ಮಿನ್ಹ್ ದಿಲ್ಲಿ ಮತ್ತು ಕಲ್ಕತ್ತೆಗೆ ಅಧಿಕೃತ ಭೇಟಿ ನೀಡಿದರು. ಅವರು ಕಲ್ಕತ್ತೆಗೆ ಭೇಟಿ ನೀಡಿದಾಗ ಲಕ್ಷಾಂತರ ಮಂದಿ ಬಂದರು. ತನ್ನ ವ್ಯಕ್ತಿತ್ವ ಮತ್ತು ಜೀವನದ ಮೂಲಕ ವಿಮೋಚನಾ ಹೋರಾಟದ, ಅಚಲ ವಿಶ್ವಾಸದ ಪ್ರತೀಕವಾಗಿದ್ದ ಒಬ್ಬ ಮುಂದಾಳುವನ್ನು, ಹೋರಾಟದ ಸಂಗಾತಿಯನ್ನು ಅಭಿನಂದಿಸಲು ಲಕ್ಷ ಲಕ್ಷ ಮಂದಿ ಬಂದರು. ಆ ದಿನಗಳಲ್ಲಿ ಮೂಡಿ ಬಂದ ಘೋಷಣೆ, "ಹಮಾರ ನಾಮ್, ತುಮ್ಹಾರನಾಮ್ ವಿಯೆಟ್ನಾಂ ವಿಯೆಟ್ನಾಂ" (ನಮ್ಮ ಹೆಸರು, ನಿಮ್ಮ ಹೆಸರು ವಿಯೆಟ್ನಾಂ ವಿಯೆಟ್ನಾಂ) ವಿಯೆಟ್ನಾಂ ಹೋರಾಟದೊಂದಿಗೆ ಸೌಹಾರ್ದತೆಯನ್ನು ಅಮರವಾಗಿಸಿತು. ಈ ಹಿಂದೆ ಹೊಚಿಮಿನ್ಹ್ ತನ್ನ ವಿದೇಶಿ ಪ್ರವಾಸಕಾಲದಲ್ಲಿ ಒಂದು ದಿನ ಕಲ್ಕತ್ತೆಯಲ್ಲಿ ತಂಗಿದ್ದರು. ಇಂಡೋ ಚೀಣಾ, ಕೊರಿಯಾ ವಿಯೆಟ್ನಾಂನ ಹೋರಾಟ ನಿರತ ಜನತೆಯೊಂದಿಗೆ ಸೌಹಾರ್ದ ಆಂದೋಲನದ ಒಂದು ಗಟ್ಟಿ ಪರಂಪರೆ ಕಲ್ಕತ್ತೆಗಿದೆ. ಇಂತಹದೊಂದು ಸೌಹಾರ್ದ ಕಾರ್ಯಾಚರಣೆಯಲ್ಲಿ ಬ್ರಿಟಿಷ್ ಪೋಲೀಸರು ಜನತೆಯ ಮೇಲೆ ಗುಂಡು ಹಾರಿಸಿದರು. ಇದರಲ್ಲಿ ಒಬ್ಬ ವೈದ್ಯಕೀಯ ವಿದ್ಯಾರ್ಥಿ ಹುತಾತ್ಮನಾದ.

ಹೊ ಚಿ ಮಿನ್ಹ್ 1969 ರಲ್ಲಿ ನಿಧನರಾದರು ಇದು ಅಂತಿಮವಾಗಿ ದಕ್ಷಿಣ ವಿಯೆಟ್ನಾಂ ವಿಮೋಚನೆಗೊಳ್ಳುವ, ವಿಯೆಟ್ನಾಂ ಪುನರೇಕೀಕರಣದ ಏಳು ವರ್ಷಗಳ ಮೊದಲು. "ಅಮೆರಿಕನ್ ಆಕ್ರಮಣದ ವಿರುದ್ಧ ಪ್ರತಿರೋಧ ಸಮರ ದೀರ್ಘಕಾಲ ಎಳೆಯಬಹುದು. ನಮ್ಮ ಜನ ಹೊಸ ಜೀವ, ಆಸ್ತಿಪಾಸ್ತಿ ಬಲಿದಾನ

ಲೆನಿನ್ ಕುರಿತು

"ಸಂಕಷ್ಟಗಳಿಂದ ನೆಲ ಕಚ್ಚಿದ, ಹಕ್ಕುಗಳಿಂದ ವಂಚಿತರಾದ ವಸಾಹತುಗಳ ಜನಗಳ ಇತಿಹಾಸದಲ್ಲಿ ಲೆನಿನ್ ಹೊಸಜೀವನದ ಸೃಷ್ಟಿಕಾರ. ದಲಿತ ಮಾನವ ಕುಲಕ್ಕೆ ವಿಮೋಚನೆಯ ದಾರಿ ತೋರಿದ ಬೆಳಕು.

ಇನ್ನೂ ಹಲವಾರು ಯುರೋಪಿಯನ್, ಅಮೆರಿಕನ್ ಕ್ರಾಂತಿಕಾರಿಗಳ ಮನದಲ್ಲಿದ್ದ ಎಲ್ಲಾ ಪೂರ್ವಾಗ್ರಹಗಳನ್ನು ದೃಢವಾಗಿ ಖಂಡಿಸಿದ ಮೊದಲಿಗ ಲೆನಿನ್.

ವಸಾಹತುಗಳಲ್ಲಿ ಬಂದು ಹೊಸ, ನಿಜವಾಗಿಯೂ ಕ್ರಾಂತಿಕಾರಿ ಯುಗದ ಬುನಾದಿ ಹಾಕಿದರು ಲೆನಿನ್ "

(1925)

ಮೂವರು ಶತ್ರುಗಳು

"ಸಮಾಜವಾದದತ್ತ ಸಾಗಲು ಒಂದು ದೀರ್ಘ, ಕಷ್ಟದ ಹೋರಾಟ ನಡೆಸಬೇಕಾಗಿದೆ. ನಮಗೆ ಕ್ರಾಂತಿಕಾರಿಗಳು ಬೇಕು. ಏಕೆಂದರೆ ಕ್ರಾಂತಿಯನ್ನು ವಿರೋಧಿಸುವ ಶತ್ರುಗಳು ಇನ್ನೂ ಇವೆ.

ಮೂರು ತರದ ಶತ್ರುಗಳಿದ್ದಾರೆ.

ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಅತ್ಯಂತ ಅಪಾಯಕಾರಿ ಶತ್ರುಗಳು

ಹಿಂದುಳಿದ ಮನೋಪ್ರವೃತ್ತಿ, ರೂಢಿಗಳು ಕೂಡಾ ದೊಡ್ಡ ಶತ್ರುಗಳು. ಅವು ಗುಪ್ತವಾಗಿ ಕ್ರಾಂತಿಯ ಮುನ್ನಡೆಗೆ ಅಡ್ಡಿ ತರುತ್ತವೆ. ಆದರೆ ಇವನ್ನು ದಮನಿಸಲು ಸಾಧ್ಯವಿಲ್ಲ. ಜಾಗರೂಕತೆಯಿಂದ ಛಲದಿಂದ, ದೀರ್ಘ ಅವಧಿಯಲ್ಲಿ ಅವನ್ನು ಸರಿಪಡಿಸಬೇಕು.

ಮೂರನೇ ಶತ್ರು ವೈಯಕ್ತಿಕತೆ. ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಇನ್ನೂ ಹೊಂಚಿ ಹಾಕುತ್ತಿರುವ ಪುಟ್ಟ ಬಂಡವಾಳಶಾಹಿ ಮನೋವೃತ್ತಿ ಸೋಲಾದಾಗಲಾಗಲೀ, ಗೆಲುವಾದಾಗಲಾಗಲೀ ತಲೆ ಎತ್ತಲು ಅವಕಾಶ ಹುಡುಕುತ್ತಿರುತ್ತದೆ ಇದು ಮೇಲೆ ಹೇಳಿದ ಎರಡು ಶತ್ರುಗಳ ಮಿತ್ರ.

ಆದ್ದರಿಂದ ಯಾವುದೇ ಸಂದರ್ಭದಲ್ಲಿ ಈ ಎಲ್ಲಾ ಶತ್ರುಗಳ ವಿರುದ್ಧ ದೃಢ ಹೋರಾಟ ನಡೆಸುವುದೇ ಕ್ರಾಂತಿಕಾರಿ ನೈತಿಕತೆ."

(1958)

ನೀಡಬೇಕಾಗಬಹುದು ಏನೇ ಆದರೂ ಅಂತಿಮ ವಿಜಯ ಗಳಿಸುವವರೆಗೆ ಅಮೆರಿಕನ್ ಆಕ್ರಮಣಕೋರರ ವಿರುದ್ಧ ಹೋರಾಡುವ ನಮ್ಮ ನಿರ್ಧಾರಕ್ಕೆ ದೃಢವಾಗಿ ಬದ್ಧರಾಗಬೇಕು. ನಮ್ಮ ಪರ್ವತಗಳು ಶಾಶ್ವತ, ನಮ್ಮ ನದಿಗಳು ಶಾಶ್ವತ, ನಮ್ಮ ಜನತೆ ಶಾಶ್ವತ, ಅಮೆರಿಕನ್ ಅತಿಕ್ರಮಣ ಕೋರರ ಸೋಲಿನ ನಂತರ ನಾವು ನೆಲವನ್ನು ಹತ್ತು ಪಟ್ಟು ಸುಂದರವಾಗಿ ಮತ್ತೆ ಕಟ್ಟುತ್ತೇವೆ." ಹೀಗೆಂದಿದ್ದರು ಹೊ ಚಿ ಮಿನ್ಹ್ ತನ್ನ ಜನತೆಗೆ, ವಿಶ್ವಕ್ಕೆ ಬಿಟ್ಟು ಹೋದ ಕೊನೆಯ ಹೇಳಿಕೆಯಲ್ಲಿ.

ಸಮರ್ಪಣೆ, ಗಾಂಭೀರ್ಯ,ನಮ್ರತೆ, ಹಾಗೂ ಉಚ್ಚ ನೈತಿಕ ಮಟ್ಟದ ಅತ್ಯಂತ ಸರಳ ಜೀವನದ ಮೂಲಕ ಹೊಚಿಮಿನ್ಹ್ ಹಲವಾರು ತಲೆಮಾರಿನ ಕ್ರಾಂತಿಕಾರಿಗಳಿಗೆ ಸ್ಫೂರ್ತಿ ನೀಡಿದ್ದಾರೆ. ಮುಂದೆಯೂ ಅವರ ಜೀವನ ಸ್ಫೂರ್ತಿ ನೀಡಲಿದೆ. ಜನತೆಗೆ ಅವರ ಅಚಲ ಬದ್ಧತೆ, ಹಾಗೂ ಸೈದ್ಧಾಂತಿಕ ವಿಶ್ವಾಸ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನಕ್ಕೊಂದು ವಿಷ ಕೊಡುಗೆ. ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷದ ನಡುವೆ ಬಹಿರಂಗ ವಾಗ್ವಿವಾದದ ಸಮಯದಲ್ಲಿ ಬರೆದ ಅವರ ಕೊನೆಯ ಹೇಳಿಕೆ ಆತ್ಮವಿಶ್ವಾಸ ಮೂಡಿಸುವ ಒಂದು ದಸ್ತಾವೇಜು. ತನ್ನ ಕೊನೆಯುಸಿರಿನ ವರೆಗೂ ಅವರು ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನ ಏಕೀಕರಣದ ಆಕಾಂಕ್ಷೆಯನ್ನು ನಿರಂಂತರವಾಗಿ ಹೊಂದಿದ್ದರು.

ಹೊ, ಹೊ, ಹೊ ಚಿ ಮಿನ್ಹ್
ವಿ ವಿಲ್ ಫೈಟ್ ವಿ ವಿಲ್ ವಿನ್
(ನಾವು ಹೋರಾಡುತ್ತೇವೆ ನಾವು ಗೆಲ್ಲುತ್ತೇವೆ)

ಎಂಬ ಘೋಷಣೆಗೆ ವಿಶ್ವಾದ್ಯಂತ ಹೋರಾಟನಿರತ ಜನತೆಯ ನಡುವೆ ಅನುರಣನಗೊಳ್ಳುತ್ತಲೇ ಇರುತ್ತದೆ.

ಅದ್ವಿತೀಯ ಗೌರವ

"ದಕ್ಷಿಣದಲ್ಲಿರುವ ನಮ್ಮ ದೇಶ ಬಾಂಧವರು ಹಾಗೂ ಉತ್ತರದಲ್ಲಿರುವವರು ಖಂಡಿತಾ ಮತ್ತೆ ಒಂದೇ ಸೂರಿನಡಿ ಏಕೀಕರಣಗೊಳ್ಳುತಾರೆ. ಧೀರ ಹೋರಾಟದ ಮೂಲಕ ಎರಡು ದೊಡ್ಡ ಸಾಮ್ರಾಜ್ಯಶಾಹಿಗಳನ್ನು - ಫ್ರೆಂಚ್ ಹಾಗೂ ಅಮೆರಿಕನ್- ಸೋಲಿಸಿದ, ಒಸ್ಟ ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ಒಂದು ಯೋಗ್ಯ ಕಾಣಿಕೆ ನೀಡಿದ ಅದ್ವಿತೀಯ ಗೌರವ ನಮ್ಮ ಸಣ್ಣ ದೇಶದ್ದಾಗಲಿದೆ."


(ಮೇ 10, 1969ರಲ್ಲಿ ಬರೆದ ಉಯಿಲಿನಲ್ಲಿ)

ಈ ಮಹಾನ್ ಕ್ರಾಂತಿಕಾರಿಯ ನೆನಪಿಗೆ ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋದ ಧೀರ ನಮನ. ಅವರ ಜನ್ಮ ಶತಾಬ್ಧಿಯನ್ನು ಅತ್ಯಂತ ಯೋಗ್ಯ ರೀತಿಯಲ್ಲಿ ಆಚರಿಸಬೇಕೆಂದು ಸಮಸ್ತ ಪಕ್ಷಕ್ಕೆ ಕರೆ ನೀಡುತ್ತದೆ ಹೊ ಚಿ ಮಿನ್ಹ್‌ರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಅವರ ಹೋರಾಟಗಳಲ್ಲಿ ಮಾರ್ಗದರ್ಶನ ನೀಡಿದ ಈಗಲೂ ವಿಶ್ವದಲ್ಲೆಲ್ಲಾ ವಿಮುಕ್ತಿಯ, ಉದ್ಧಾರದ ಹೋರಾಟದಲ್ಲಿ ಜನಗಳಿಗೆ ಮಾರ್ಗದರ್ಶನ ನೀಡುತ್ತಿರುವ ಮಾರ್ಕ್ಸ್‌ವಾದಿ ತತ್ವ ಮತ್ತು ಸಿದ್ಧಾಂತಕ್ಕೆ ತನ್ನ ಬದ್ಧತೆಯನ್ನು ಸಿ.ಪಿ.ಐ.(ಎಂ) ಪುನರುಚ್ಚರಿಸುತ್ತದೆ. ಎಲ್ಲಾ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳಿಗೆ,

ಹೋರಾಟನಿರತ ಜನತೆಗೆ ಅಮೂಲ್ಯ ಮಾರ್ಗದರ್ಶನ ನೀಡುವ ಅವರ ಕೃತಿಗಳನ್ನು, ಕಾಣಿಕೆಗಳನ್ನು ಜನ ಜನಿತಗೊಳಿಸಬೇಕೆಂದು ಪಕ್ಷದ ಕಾರ್ಯಕರ್ತರಿಗೆ ಪಿ.ಬಿ. ಕರೆ ನೀಡುತ್ತದೆ.

ಶೋಷಿತ ಜನತೆಯ
ವಿಮುಕ್ತಿಗಾಗಿ ಒಂದು ಅದಮ್ಯ ಚೇತನವನ್ನು
ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯಶಾಹಿ ಸೇನೆ ಕೂಡಾ
ಹತ್ತಿಕ್ಕಲು ಸಾಧ್ಯವಿಲ್ಲ
ಎಂಬುದನ್ನು ಜಗತ್ತಿಗೇ ತೋರಿಸಿಕೊಟ್ಟ
ಧೀರ ಹೋರಾಟದ, ವಿಶ್ವ ಮಟ್ಟದಲ್ಲಿ ವರ್ಗ ಶಕ್ತಿಗಳ
ಬಲಾ ಬಲವನ್ನು ಬದಲಿಸುವಲ್ಲಿ ವಿಶೇಷ ಕಾಣಿಕೆ ನೀಡಿದ ಈ
ಹೋರಾಟದ ನೇತೃತ್ವ ವಹಿಸಿದ್ದವರು
ಹೊ ಚಿ ಮಿನ್ಹ್.





ಬೆಲೆಯೇರಿಕೆ: ಇನ್ನೂ ಸಮಯ ಮಿಂಚಿಲ್ಲ
ರಾಷ್ಟ್ರೀಯ ರಂಗ ಸರ್ಕಾರ ಎಚ್ಚೆತ್ತುಕೊಳ್ಳಬೇಕು.

ಮಾರುಕಟ್ಟೆಗೆ ಬೆಂಕಿ ಬಿದ್ದಿದೆ. ಜನ ಬೆಲೆಯೇರಿಕೆಯ ಬಿಸಿಯಿಂದ ಪರಿತಪಿಸುತ್ತಿದ್ದಾರೆ.

ರಾಷ್ಟ್ರೀಯ ರಂಗ ಸರ್ಕಾರ ಅಧಿಕಾರ ವಹಿಸಿಕೊಂಡಾಗ ಡಿಸೆಂಬರ್ ಮೊದಲ ವಾರದಲ್ಲಿ ಸಗಟು ಬೆಲೆ ಸೂಚ್ಯಂಕ (ಆಧಾರ ವರ್ಷ: ೧೯೮೧-೮೨ - ೧೦೦) ೧೬೬.೬ ಇದ್ದದ್ದು ಏಪ್ರಿಲ್ ೨೧ ರಂದು ೧೭೨.೪ಕ್ಕೇರಿದೆ. ಹಣದುಬ್ಬರ ದರ ೭.೨ ಇದ್ದದ್ದು ೮.೭ ಶೇಕಡಾಕ್ಕೇರಿದೆ.

ಏಪ್ರಿಲ್ ೭ ರಿಂದ ೧೪ರ ನಡುವೆಯೇ ದ್ವಿದಳಧಾನ್ಯಗಳ ಸಗಟು ಬೆಲೆ ೧.೪ ಶೇಕಡಾದಷ್ಟು ತರಕಾರಿ ೪.೮, ಸಾಂಬಾರ ಜಿನಸು ೧.೩, ಸಕ್ಕರೆ ಇತ್ಯಾದಿ ೧-೨, ಖಾದ್ಯ ತೈಲ ೦.೭, ಹಾಗೂ ಉರುವಲು ೧.೧ ಶೇಕಡಾದಷ್ಟು ಏರಿದೆ. ಒಂದೇ ವಾರದಲ್ಲಿ ನಂತರದ ಒಂದು ವಾರದಲ್ಲಿ ಇವು ಮತ್ತೆ ಅನುಕ್ರಮವಾಗಿ ೦-೨, ೩-೭, ೧.೩, ೦.೩, ೦.೯, ೦.೫, ಶೇಕಡಾ ಏರಿದವು. ಸಿಮೆಂಟ್ ಬೆಲೆ ೯.೯% ಒಂದೇ ವಾರದಲ್ಲಿ ಏರಿತು. ಮಾರ್ಚ್ ಕೊನೆಯ ವಾರದಲ್ಲಿ ತರಕಾರಿ ಬೆಲೆ ೯.೨% ರಷ್ಟು ಏರಿತ್ತು.

ನಿಜ, ರಾಷ್ಟ್ರೀಯರಂಗ ಸರ್ಕಾರ ಕಾಂಗ್ರೆಸ್(ಐ) ಸರ್ಕಾರ ನುಚ್ಚುನೂರು ಮಾಡಿದ್ದ ಆರ್ಥಿಕವನ್ನು ಬಳುವಳಿಯಾಗಿ ಪಡೆದಿತ್ತು. ಆದರೆ ಹಣಕಾಸು ಮಂತ್ರಿ ದಂಡವತೆಯವರು ಮಂಡಿಸಿದ ಬಜೆಟ್ ಹಳೆಜಾಡನ್ನು ಬಿಟ್ಟು ಹೊಸದಾರಿ ಹಿಡಿದಿರಲಿಲ್ಲ ಎಂಬುದೂ ಅಷ್ಟೇ ನಿಜ. ಸರ್ಕಾರವನ್ನು ಬೆಂಬಲಿಸಿದ ಪಕ್ಷಗಳು ಇದೊಂದು ಹಣದುಬ್ಬರ ಸೃಷ್ಟಿಸುವ ಬಜೆಟ್ ಎಂದು ಎಚ್ಚರಿಸಿದ್ದವು. ರೈಲ್ವೇ, ದರಗಳ ತೀವ್ರ ಏರಿಕೆ, ಮಧು ದಂಡವತೆಯವರ ಆರ್ಥಿಕ ಧೋರಣೆಗಳ ನಿಜವಾದ ಪರಿಣಾಮ ದಿನ ಹೋದಂತೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಸಗಟು ಬೆಲೆಯ ಸೂಚ್ಯಂಕದ ಏರಿಕೆಯ ಹಾಗೂ ಹಣದುಬ್ಬರದ ಪ್ರಮಾಣ ಮಾರ್ಚ್ ಮಧ್ಯಭಾಗದಿಂದ ವಿಪರೀತ ಹೆಚ್ಚುತ್ತಿರುವುದನ್ನು ಈ ಕೆಳಗಿನ ತಖ್ತೆಯಿಂದ ಕಾಣಬಹುದು.


ಈಗಲೂ ಸಮಯ ಮಿಂಚಿಲ್ಲ. ಹಣಕಾಸು ಮಸೂದೆಯನ್ನು ಇನ್ನೂ ಲೋಕಸಭೆಯಲ್ಲಿ ಮಂಡಿಸಿಲ್ಲ. ಆದ್ದರಿಂದ ಮುಳುಗುತ್ತಿರುವ ಆರ್ಥಿಕವನ್ನು ಉಳಿಸಲು ಸರ್ಕಾರ ಏನಾದರೂ ಮಾಡಲು ಸಾಧ್ಯ. ಪೆಟ್ರೋಲಿಯಂ ಉತ್ಪಾದನೆಗಳ ಬೆಲೆಯೇರಿಕೆಯನ್ನು ವಾಪಸು ಪಡೆಯುವುದು, ಹೇರಿದ ಇತರ ಪರೋಕ್ಷ ತೆರಿಗೆ ತೀವ್ರ ಕಡಿತ ತರಲು ಮಾರ್ಗೋಪಾಯ ಕಂಡುಹಿಡಿಯುವುದು ಹಣಕಾಸು ಮಂತ್ರಿಗಳಿಗೆ ಈಗಿರುವ ಏಕೈಕ ಮಾರ್ಗ. ನಿಜ ಯೋಜನಾ ಹಾಗೂ ಯೋಜನೇತರ ಬಾಬ್ತುಗಳಿಗೆ ಸಂಪನ್ಮೂಲ ಬೇಕು. ಮಹತ್ವದ ಪ್ರಶ್ನೆಯೆಂದರೆ ಇದನ್ನು ಯಾರು ತೆರಬೇಕು? ತೆರುವ ಸಾಮರ್ಥ್ಯವಿರುವವರಿಂದ ಇದನ್ನು ಪಡೆಯಬೇಕು.

ರಾಜಕೀಯ ಸನ್ನಿವೇಶ ತ್ವರಿತವಾಗಿ ಹದಗೆಡುತ್ತಿರುವಾಗ ಕಾಶ್ಮೀರ, ಪಂಜಾಬ್, ಅಸ್ಸಾಂನಲ್ಲಿ ಬೆಂಕಿ ಪ್ರಜ್ವಲಿಸುತ್ತಿರುವಾಗ ರಾಷ್ಟ್ರೀಯ ರಂಗದ ಸರ್ಕಾರದ ಬಗ್ಗೆ ವಿಶ್ವಾಸಕೂಡ ತ್ವರಿತವಾಗಿ ಕ್ಷೀಣಗೊಳ್ಳಲಾರಂಭಿಸಿದೆ ಎಂಬುದನ್ನು ಅದು ಅರಿಯಬೇಕು. ಆರ್ಥಿಕ ರಂಗವೂ ಉರಿಯಲಾರಂಭಿಸಿದರೆ ಮುಂದಿನ ಪಯಣ ಅತ್ಯಂತ ಅಪಾಯಕಾರಿ ಇನ್ನು ಸಮಯ ಮಿಂಚಿಲ್ಲ. ಸರ್ಕಾರ ಯೋಚಿಸಲಿ ಸೂಕ್ತ ಕಾರ್ಯಾಚರಣೆ ನಡೆಸಲಿ ಎಂಬುದು ಜನತೆಯ ಆಶಯ.

ಬೆಲೆ ಏರಿಕೆ ಎಷ್ಟು?

ಡಿಸೆಂಬರ್ '೮೯ ರಿಂದ ಏಪ್ರಿಲ್ ೯೦ರ ನಡುವೆ ಸಗಟು ಬೆಲೆ ಏರಿಕೆಯ, ಹಣದುಬ್ಬರದ ಪ್ರಮಾಣವನ್ನು ತೋರಿಸುವ ಸೂಚ್ಯಂಕವನ್ನು ಕೆಳಗೆ ಕೊಡಲಾಗಿದೆ. ೧೯೮೧-೮೨ರ ಬೆಲೆಗಳು ೧೦೦ಎಂದಿಟ್ಟುಕೊಂಡು ಲೆಕ್ಕ ಹಾಕಿದ ಸೂಚ್ಯಂಕ ಇದು. ಕಳೆದ ವರ್ಷ ಅದೇ ವಾರಕ್ಕೆ ಹೋಲಿಸಿದರೆ ಹಣದುಬ್ಬರ ಎಷ್ಟು ಶೇಕಡಾ ಎಂಬುದನ್ನು ಮೂರನೇ ಕಾಲಂನಲ್ಲಿ ಕೊಡಲಾಗಿದೆ. ಈ ಅಂಕಿ ಅಂಶಗಳನ್ನೂ ಪ್ರತೀವಾರದ ಅಂತ್ಯದಲ್ಲಿ ಹಾಕಲಾಗುತ್ತದೆ.

ವಾರಾಂತ್ಯ		ಸಗಟುಬೆಲೆ ಸೂಚ್ಯಂಕ	ಹಣ ದುಬ್ಬರ%
ಡಿ	2	166.6	7.2
	9	166.5	7.2
	16	166.4	7.4
	30	165.9	7.5
ಜ	6	166.2	6.8
	13	166.5	6.9
	20	166.8	6.9
	27	167.1	7.3
ಫೆ	3	167.2	7.3
	10	167.6	7.2
ಮಾ	3	168.8	7.1
	10	169.4	8.3
	17	169.5	8.2
	24	170.3	
	31	170.7	8.3
ಏ	7	171.6	8.5
	14	172.2	8.7
	21	172.4	8.7



ಭೂಮಾಲಿಕ ಬಂಡವಾಳಶಾಹಿಗಳ ಧಾಳಿಗಳನ್ನೆದುರಿಸಿ.....

ಹಿಂದೂಸ್ತಾನ್ ಸೇಫ್ಟಿ ಗ್ಲಾಸ್ ವರ್ಕ್ಸ್ ಲಿಮಿಟೆಡ್ ಅಥವಾ ಚ್.ಎಸ್.ಜಿ. ಉತ್ತರಪ್ರದೇಶದ ಅಲಹಾಬಾದ್ ಜಿಲ್ಲೆಯಲ್ಲಿರುವ ಂದು ಕಾರ್ಖಾನೆ. ಹತ್ತಿರದ ಘೋರ್‌ಪುರ್‌ನಲ್ಲಿ ಇನ್ನೊಂದು ರ್ಖಾನೆಯಿದೆ - ತ್ರಿವೇಣಿ ಶೀಟ್ ಗ್ಲಾಸ್ ಲಿಮಿಟೆಡ್ ಇವೆರಡರ ಾಲಿಕನೂ ಒಬ್ಬನೇ ಪಿ.ಕೆ. ಅಗರ್‌ವಾಲ್ ಎಂಬಾತ ಎರಡೂ ಕಡೆ .ಐ.ಟಿ.ಯು ಸಂಘಗಳಿವೆ. ತ್ರಿವೇಣಿ ಶೀಟ್ ಗ್ಲಾಸ್ ಕಂಪನಿಯ ರ್ಮಿಕರು ಜನ್ಸಾದ ಭೂಹೀನ ಕಾರ್ಮಿಕರು ಅಖಿಲ ಭಾರತ ಕೃಷಿ ೂಲಿಕಾರ ಸಂಘದ ನೇತೃತ್ವದಲ್ಲಿ ಭೂಹೋರಾಟ ನಡೆಸಿದಾಗ ಅವರ ಂಬಲವಾಗಿ ಮಹತ್ವದ ಪಾತ್ರವಹಿಸಿದ್ದರು. ಸಹಜವಾಗಿಯೇ ಈ ್ರದೇಶದ ಭೂಮಾಲಿಕರು (ಇವರಲ್ಲಿ ಶಂಕರ ಘಡದ ಮಾಜಿ ರಾಜನೂ ಸೇರಿದ್ದಾನೆ), ಪಿ.ಕೆ. ಅಗರ್‌ವಾಲಾನಂತಹ ಮಾಲಿಕರು ಕುಪಿತರಾಗಿದ್ದರು. ಚ್.ಎಸ್.ಜಿ.ಯ ಕಾರ್ಮಿಕರು ತಮ್ಮ ನ್ಯಾಯ ಪೂರ್ಣ ೇಡಿಕೆಗಳಿಗಾಗಿ ಹೋರಾಟ ಆರಂಭಿಸಿದಾಗ ಇದು ಸ್ಪಷ್ಟವಾಗಿ ಕಂಡು ಂತು.

೧೫ ತಿಂಗಳಿಂದ ಮುಷ್ಕರ ನಡೆಸುತ್ತಾ ಹಲವಾರು ಕಾರ್ಮಿಕರು ಸ್ಪೆಂಶನ್ ಮತ್ತಿತರ ಕಿರುಕುಳ ಎದುರಿಸುತ್ತಿದ್ದು ಏಪ್ರಿಲ್ ೧೭ ಂದ ಟೂಲ್ ಡೌನ್ ಮುಷ್ಕರ ಆರಂಭಿಸಿದ್ದರು. ಮುಷ್ಕರ ತೆಯಲಾಗದ ಮೂಲಕ ಪೋಲೀಸರ ನೆರವು ಪಡೆದ ಸಂಘದ ಧ್ಯಕ್ಷರೂ ಸೇರಿದಂತೆ ಹಲವಾರು ಕಾರ್ಮಿಕರನ್ನು ಲಾಕಪ್ಪಿಗೆ ಾಕಲಾಯಿತು. ಆದರೆ ಮೊಕದ್ದಮೆ ಹಾಕಲಾಗದೆ ಬಿಡುಗಡೆ ಾಡಬೇಕಾಯಿತು ಕೂಡಾ. ಮ್ಯಾನೇಜ್‌ಮೆಂಟ್ ತನ್ನ ಪ್ರಯತ್ನ ಮುಂದುವರೆಸಿತು. ಕುಖ್ಯಾತ ಕ್ರಿಮಿನಲ್‌ಗಳನ್ನು ವಾಚ್‌ಮನ್‌ಗಳಾಗಿ ೇಮಿಸಿಕೊಂಡು ಏಪ್ರಿಲ್ ೨೫ ರಂದು ಕಾರ್ಮಿಕರ ಮೇಲೆ ಛೂ ಟ್ಟಿತು. ಕಾರ್ಮಿಕರು ಅವರನ್ನು ಹಿಮ್ಮೆಟ್ಟಿಸಿದಾಗ ಪೋಲೀಸರು ಿಮಿನಲ್‌ಗಳ ನೆರವಿಗೆ ಬಂದರು. ಸಿಕ್ಕಾಪಟ್ಟೆ ಗೋಳಿಬಾರು ಡೆಸಿದರು. ಇಬ್ಬರೂ ಕಾರ್ಮಿಕ ಮುಖಂಡರು ತೀವ್ರವಾಗಿ ಾಯಗೊಂಡರು. ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಹಾಗೂ ಸಂಘದ ಅಧ್ಯಕ್ಷರು ರಕ್ತ ನೀಡಿ ಗಾಯಗೊಂಡ ಕಾರ್ಮಿಕರನ್ನು ಉಳಿಸಿಕೊಂಡರು. ಏಪ್ರಿಲ್ ೨೭ ರಂದು ಜಿಲ್ಲೆಯ ಕಾರ್ಮಿಕ ವರ್ಗ ರಸ್ತಾ ರೋಕೋ ನಡೆಸಿ ಹೆಚ್.ಎಸ್.ಜಿ. ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಿತು. ನಂತರ ಎರಡು ದಿನದಲ್ಲಿ ಬೆಂಬಲ ಸೂಚಿಸುವ ರ್‍ಯಾಲಿಗಳು ನಡೆದವು. ತ್ರಿವೇಣಿ ಕಂಪೆನಿಯ ಗೇಟಿನ ಮುಂದೆಯೂ ನಡೆಯಿತು. ಗೂಂಡಾಗಳ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು. ಆದರೂ ಒಂದಿಲ್ಲೊಂದು ನೆಪ ಹೇಳಿ ಪೋಲೀಸರು ತಪ್ಪಿಸಿಕೊಳ್ಳುತ್ತಿದ್ದಾರೆ. ಹಲ್ಲೆ ನಡೆಸಿದ ಗೂಂಡಾಗಳ ಮುಖಂಡನನ್ನು ಇನ್ನೂ ಬಂಧಿಸಿಲ್ಲ.

ಈ ನಡುವೆ ಕಾರ್ಮಿಕರ ಹೋರಾಟ ಮುಂದುವರೆಯುತ್ತಿದೆ. ರಾಜ್ಯದ ಜನತಾದಳ ಸರಕಾರಕ್ಕೆ ಬೇಷರತ್ ಬೆಂಬಲ ನೀಡಿದ್ದರೂ ಕಾರ್ಮಿಕರ, ರೈತರ ಹಿತಾಸಕ್ತಿಗಳ ಪ್ರಶ್ನೆ ಬಂದಾಗ ಯಾವ ರಾಜಿಯೂ ಸಾಧ್ಯವಿಲ್ಲ ಎಂದು ಸಿ.ಪಿ.ಐ(ಎಂ), ಸಿ.ಐ.ಟಿ.ಯು., ಕೃಷಿ ಕೂಲಿಗಾರರ ಸಂಘ ತೋರಿಸಿಕೊಡುತ್ತಿವೆ. ಕಾರ್ಮಿಕರು ಹೋರಾಟಕ್ಕೆ ಸಕಲ ಬೆಂಬಲ ಸಂಘಟಿಸುತ್ತಿವೆ. ಮೇ ೧ ರಿಂದ ತ್ರಿವೇಣಿ ಕಂಪೆನಿಯ ಕಾರ್ಮಿಕರೂ ಸೌಹಾರ್ದ ಮುಷ್ಕರ ಆರಂಭಿಸಿದ್ದಾರೆ. ಈ ನಡುವೆ ಹುತಾತ್ಮ ಜಾಥಾಗಳು ಕಾರ್ಖಾನೆಯ ಸುತ್ತ ಮುತ್ತ ದಿನವಿಡೀ ಕಾವಲು ನಿಂತಿವೆ.

ಕಾಂಗ್ರೆಸ್(ಐ) ತನ್ನ ಆಸೆ ಕೈ ಬಿಟ್ಟಿದೆ

೧೯೮೭ರ ಮಾರ್ಚ್‌ನಲ್ಲಿ ಒಟ್ಟು ೩೬ ಗೇರು ಬೀಜ ಕಾರ್ಖಾನೆಗಳು ಮುಚ್ಚಿದ್ದವು. ಈಗ ಗೇರುಬೀಜ ಕಾರ್ಪೊರೇಶನ್‌ನಡಿ ಈ ೩೬ ಸೇರಿದಂತೆ ೭೦ ಕಾರ್ಖಾನೆಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ. ಗ್ವಾಲಿಯರ್ ರೇಯಾನ್ಸ್ ಸೇರಿದಂತೆ ೧೯೮೭ ರಲ್ಲಿ ಮುಚ್ಚಿದ್ದ ಹತ್ತಾರು ದೊಡ್ಡ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಮತ್ತೆ ತೆರೆದಿವೆ. ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತೆ ತೆರೆದು ೨೫೦೦ ಮಂದಿಗೆ, ಖಾಸಗೀ ವಲಯದ ಉದ್ದಿಮೆಗಳು ಮತ್ತೆ ಕಾರ್ಯಾರಂಭಿಸಿ ೮೩೦೦ ಕಾರ್ಮಿಕರಿಗೆ ಮತ್ತೆ ಕೆಲಸ ದೊರಕಿದೆ. ಅಷ್ಟೇ ಅಲ್ಲ ಈ ಉದ್ದಿಮೆಗಳನ್ನಾಧರಿಸಿದ್ದ ವಲಯಗಳಲ್ಲಿ ಪರೋಕ್ಷವಾಗಿ ೨೦ ಸಾವಿರ ಮಂದಿಗೆ ಉದ್ಯೋಗ ದೊರೆತಂತಾಗಿದೆ.

ಇದು ಮೂರು ವರ್ಷ ಪೂರೈಸಿರುವ ಕೇರಳದ ಎಲ್..ಡಿ.ಎಫ್. ಸರ್ಕಾರದ ದೊಡ್ಡ ಸಾಧನೆಗಳಲ್ಲಿ ಒಂದು, ಕೈಗಾರಿಕೆ ಮುಚ್ಚಲು ಕಾರ್ಮಿಕರಲ್ಲ ಕಾರಣ, ಮಾಲಿಕ ಲಾಭದಾಸೆ, ಅಥವಾ ದುರಾಡಳಿತ ಎಂಬುದನ್ನು ಮತ್ತೆ ತೋರಿಸಿಕೊಟ್ಟ ನಿದರ್ಶನ ಇದು. ಇವೆಲ್ಲಾ ಉದ್ದಿಮೆಗಳೀಗ ಲಾಭಪ್ರದವಾಗಿ ನಡೆಯುತ್ತಿವೆ.

ಎಲ್.ಡಿ.ಎಫ್. ಸರಕಾರದ ೩ ವರ್ಷಗಳ ಸಾಧನೆ ಇಷ್ಟೇ ಅಲ್ಲ. ೧೯೮೭ರ ಮಾರ್ಚ್‌ನಲ್ಲಿ ಅಧಿಕಾರಕ್ಕೆ ಬಂದಾಗ ಕರುಣಾಕರನ್ ಸರಕಾರ ರಾಜೀವ ಸರಕಾರದ 'ಉದಾರತೆ'ಯಿಂದಾಗಿ ಮಾಡಿದ ೨೭-೨೯ ಕೋಟಿ ರೂ ಸಾಲ ಎಲ್.ಡಿ.ಎಫ್. ಸರಕಾರದ ಮೇಲೆ ಬಂದಿತ್ತು. ಆದರೂ ಸರ್ಕಾರದ ಆರ್ಥಿಕವನ್ನು ದುರಸ್ತಿ ಮಾಡಿ, ಸರ್ಕಾರಿ ಉದ್ದಿಮೆಗಳನ್ನು ಸಂಘಟಿಸಿ, ಗೇರುಬೀಜ, ನಾರು, ಕೈಮಗ್ಗ ಮುಂತಾದ ವಲಯಗಳಿಗೆ ವಿಶೇಷ ನೆರವು ಒದಗಿಸಿ, ಮುಚ್ಚಿದ ಕಾರ್ಖಾನೆಗಳನ್ನು ತೆರೆದು, ಹಲವಾರು ಹೊಸದನ್ನು ಆರಂಭಿಸಿ ಜನರ ಸಮಸ್ಯೆಗಳನ್ನು ಪರಿಹರಿಸಲು ಸರ್ವ ಪ್ರಯತ್ನ ನಡೆಸಿದೆ.

೧೯೧೪೨ ಹೊಸ ಸಣ್ಣ ಪ್ರಮಾಣದ ಉದ್ದಿಮೆಗಳು ೧,೧೪,೮೫೨ ಜನರಿಗೆ ಉದ್ಯೋಗ ನೀಡಿವೆ. ರೋಗಗ್ರಸ್ತ ಘಟಕಗಳ ಆರೋಗ್ಯ ಸರಿಪಡಿಸಿ ೬೪೫೦ ಜನರಿಗೆ ಸರಕಾರದ ವಿಶೇಷ ನೆರವಿನಿಂದ ಸ್ಥಾಪಿಸಲಾಗಿದೆ. ೧೯೯೦ರ ದಶಕ ಕೇರಳದ ಕೈಗಾರಿಕೀಕರಣ ದಶಕ ಎಂದು ಘೋಷಿಸಲಾಗಿದೆ ಮಾತ್ರವಲ್ಲ, ಎಲ್.ಡಿ.ಎಫ್. ಸರಕಾರ ಆ ದಿಕ್ಕಿನಲ್ಲಿ ಸಾಕಷ್ಟು ಮುನ್ನಡೆದಿದೆ.

ಭತ್ತ ಬೆಳೆಯುವ ಸಮೂಹ ಬೇಸಾಯ, ಅದೇ ರೀತಿ ತೆಂಗಿನ ತೋಟದ ಸಮೂಹ ನಿರ್ವಹಣೆಯ ನವೀನ ಪ್ರಯೋಗ ಈ ಮೂರು ವರ್ಷಗಳಲ್ಲಿ ಎಲ್.ಡಿ.ಎಫ್.ನ ಇನ್ನೊಂದು ಪ್ರಮುಖ ಸಾಧನೆ. ಭತ್ತದ ಉತ್ಪಾದನಾ ವೆಚ್ಚ ಇಳಿಸಿ, ಉತ್ಪಾದನೆ ಹೆಚ್ಚಿಸಲು ಸಮೂಹ ಬೇಸಾಯದಿಂದ ಸಾಧ್ಯವಾಗಿದೆ. ಗ್ರಾಮೀಣ ಉದ್ಯೋಗಾವಕಾಶ ಕೂಡಾ ಹೆಚ್ಚಿದೆ.

ಕಳೆದ ಎಲ್.ಡಿ.ಎಫ್. ಸರಕಾರದಂತೆ ಸಾರ್ವಜನಿಕ ವಿತರಣಾ ರಂಗದಲ್ಲಿ ಈ ಬಾರಿಯ ಎಲ್.ಡಿ.ಎಫ್. ಸರಕಾರದ್ದೂ ಅದ್ವಿತೀಯ ದಾಖಲೆ. ರಾಜ್ಯದಲ್ಲಿ ಸಹಕಾರಿ ಆಂದೋಲನದ ವಿಸ್ತರಣೆ ಇಡೀ ದೇಶದಲ್ಲೇ ಅತ್ಯಂತ ವ್ಯಾಪಕ.

ಕಳೆದ ಮೂರು ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಉಳುಮೆಗಾರರಿಗೆ ಪಟ್ಟಾ ನೀಡುವ ತೀವ್ರ ಕಾರ್ಯಕ್ರಮ ನೆರವೇರಿಸಲಾಗಿದೆ. ಇದರಿಂದ ಕೇಂದ್ರ ಸರ್ಕಾರ ಅವರ ಉಳುವೆಯ ಹಕ್ಕನ್ನು ಮಾನ್ಯ ಮಾಡುವಲ್ಲಿ ಆಗುತ್ತಿರುವ ವಿಳಂಬದಿಂದ ಅವರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸಾಧ್ಯವಾಗಿದೆ. ಶಿಕ್ಷಣವನ್ನು ಲಾಭಕೋರರಿಂದ ಉಳಿಸುವುದೂ ಎಲ್.ಡಿ.ಎಫ್. ಸರಕಾರಕ್ಕೆ ಸಾಧ್ಯವಾಗಿದೆ.

ಇದರಿಂದಾಗಿ ೧೯೫೭, ೧೯೬೭ರ ಇ.ಎಂ.ಎಸ್. ನೇತೃತ್ವದ ೧೯೮೦ರ ನಯನಾರ್ ನೇತೃತ್ವದ ಸರಕಾರಗಳನ್ನು ಉರುಳಿಸಿದಂತೆ ೧೯೮೭ರ ನಯನಾರ್ ಸರ್ಕಾರವನ್ನು ಉರುಳಿಸಲು ಸಾಧ್ಯ ಎಂಬ ಆಸೆಯನ್ನು ಕಾಂಗ್ರೆಸ್(ಐ) ಮುಖಂಡತ್ವ ಕೂಡಾ ಕೈ ಬಿಟ್ಟಿದೆ.

ಕಾನೂನು ವ್ಯವಸ್ಥೆ ಮಾಯವಾಗಿದೆ

೧೧೦ ಮಂದಿಯ ಕೊಲೆ, ೨೫ ಡಕಾಯಿತಿಗಳು, ೪೩೮ ಇತರ ಕೇಸುಗಳು. ೩೯ ಶಸ್ತ್ರಾಸ್ತ್ರಗಳ ಕಳವು, ೭೯ ಸರ್ಕಾರಿ ಬಸ್ಸುಗಳಿಗೆ, ೯ ಲಾರಿ, ೨೭ ಜೀಪುಗಳು, ೭ ಟ್ರಾಕ್ಟರುಗಳಿಗೆ ಬೆಂಕಿ, ೩೮ ಬಾರಿ ಹಳ್ಳಿಯ ಸೇಂದಿ ಅಂಗಡಿಗಳ ಲೂಟಿ, ಇದು ಆಂಧ್ರಪ್ರದೇಶದ ಕಾಂಗ್ರೆ ಸರಕಾರವೇ ನಕ್ಸಲೈಟ್ ಹಾವಳಿ ಬಗ್ಗೆ ನೀಡಿರುವ ಅಂಕಿ ಅಂಶಗಳು. ಆದರೂ ಚೆನ್ನಾರೆಡ್ಡಿ ಸರ್ಕಾರ ಅವರಿಗೆ ಒಂದಾದ ಮೇಲೊಂದರಂತೆ ರಿಯಾಯ್ತಿ ನೀಡುತ್ತಿದೆ. ಅವರೆದುರು ಮೊಣಕಾಲೂರುತ್ತಿದೆ.

ತೆಲುಗು ದೇಶಂ ಸರ್ಕಾರ ಅಧಿಕಾರದಲ್ಲಿದ್ದಾಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್(ಐ), ಸರಕಾರವನ್ನು ಉರುಳಿಸಲು ಹಿಡಿದ ಹಲವು ಮಾರ್ಗಗಳಲ್ಲಿ ಈ ನಕ್ಸಲ್‌ಬಾರಿ ಭಯೋತ್ಪಾದನೆಯನ್ನು ಕುತಂತ್ರದಿಂದ ಬಳಸಿಕೊಂಡದ್ದು ಒಂದು. ಈಗ ಅಧಿಕಾರಕ್ಕೆ ಬಂದಾಗ ಆಗಿನ ನೆರವಿಗೆ ಪ್ರತಿಯಾಗಿ ನಕ್ಸಲೀಯರಿಗೆ ಅದು ಪ್ರತಿಫಲ ನೀಡುತ್ತಿದೆ. ಪರಿಣಾಮವಾಗಿ ಕಾನೂನು-ವ್ಯವಸ್ಥೆಯೆಂಬುದೇ ಇಲ್ಲವಾಗಿದೆ. ನಿಜಾಮಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಸಭೆಯೊಂದರಲ್ಲಿ ಡಿ.ಎಸ್.ಪಿ.ಯನ್ನು ನೇತು ಹಾಕುತ್ತವೆ ಎಂದು ಅವರು ಬಹಿರಂಗವಾಗಿಯೇ ಹೇಳುವ ಮಟ್ಟದವರೆಗೆ ಇಳಿದಿದೆ ಕಾನೂನು ವ್ಯವಸ್ಥೆ. ಕೆಲವು ಪೋಲೀಸ್ ಅಧಿಕಾರಿಗಳೂ ಈಗ ಕಾಂಗ್ರೆ ಆಡಳಿತದ ಬಗ್ಗೆ ಅತೃಪ್ತಿ ವ್ಯಕ್ತ ಪಡಿಸಲಾರಂಭಿಸಿದ್ದಾರೆ.

ಕಾಂಗ್ರೆ ಘೋಷಣೆಯಲ್ಲಿ ನಕ್ಸಲೀಯರ ಮೊದಲ ಗುರಿ ಸಿ.ಪಿ.ಐ(ಎಂ) ಕಾರ್ಯಕರ್ತರು ಸಿ.ಪಿ.ಐ(ಎಂ) ಪ್ರಭಾವ ಬೆಳೆಯುತ್ತಿರುವ ಮೆಹಬೂಬ್ ನಗರ ಜಿಲ್ಲೆ ಪ್ರವೇಶಿಸಲು ನಕ್ಸಲೀಯರು ತಮ್ಮ ಭಯೋತ್ಪಾದಕ ಹಲ್ಲೆ ತೀವ್ರಗೊಳಿಸಿದ್ದಾರೆ.

ನಕ್ಸಲೈಟ್ ಗುಂಪುಗಳು ವಿಶೇಷವಾಗಿ ಪೀಪಲ್ಸ್‌ವಾರ್ ಗುಂಪು ಕೊಲೆಗಡುಕರ, ಸುಲಿಗೆ ಖೋರರ ಮಟ್ಟಕ್ಕೆ ಇಳಿದಿವೆ.

ಆನಂದ ಮಾರ್ಗಿಗಳ ಪಿತೂರಿ ಏನಿತ್ತು?

ಪಶ್ಚಿಮ ಬಂಗಾಳದಲ್ಲಿ ಆನಂದ ಮಾರ್ಗದ ಭಯೋತ್ಪಾದಕರ ಯೋಜನೆಯೇನಿತ್ತು? ಭಾರತ ಪಾಕ್ ಗಡಿಯಲ್ಲಿ ಸಿಕ್ಕಿ ಬಿದ್ದ ಇಬ್ಬರು ಆನಂದ ಮಾರ್ಗಿಗಳ ವಿಚಾರಣೆಯಿಂದ ಹೊರ ಬಂದಿರುವ ಸಂಗತಿಯೇನು? ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸುರವರ ನಿಕಟ ಸಂಬಂಧಿಗಳನ್ನು ಅಪಹರಿಸಿ ಅವರ ಕೊಲೆ-ಆದರೆ ಪಶ್ಚಿಮ ಬಂಗಾಳದಲ್ಲಿ ಅಲ್ಲ, ದೆಹಲಿಯಲ್ಲಿ. ನಂತರ ಅದು ಜಮ್ಮು ಕಾಶ್ಮೀರ ಭಯೋತ್ಪಾದಕರ ಅಥವಾ ಖಾಲಿಸ್ತಾನಿಗಳ ಕೃತ್ಯ ಎಂದು ಸುದ್ದಿ ಹರಡುವುದು. ಪಶ್ಚಿಮ ಬಂಗಾಳದಲ್ಲಿ ಇದನ್ನು ಮಾಡಲು ಅವರಿಗೆ ಭಯ-ಜನರ ರೊಚ್ಚಿಗೆ ಬಲಿಯಾಗಬೇಕಾದೀತು ಎಂದು ಸಿ.ಪಿ.ಐ(ಎಂ)ನ ಪಶ್ಚಿಮ ಬಂಗಾಳದ ಪ್ರಮುಖ ಸದಸ್ಯರೂ ಅವರ ಅಪಹರಣದ ಪಟ್ಟಿಯಲ್ಲಿದ್ದಾರೆ.

ಲೋಕಸಭೆಯಲ್ಲಿ ಈ ಪ್ರಶ್ನೆಯೆತ್ತಿದಾಗ ಬಿ.ಜೆ.ಪಿ. ಮುಖಂಡ ಅಡ್ವಾನಿ ಪುರಾವೆಯಲ್ಲಿದೆ ತಾನಿದನ್ನು ಒಪ್ಪಲಾರೆ ಎಂದು ಘೋಷಿಸಿದರು. ತಾನು ಬೆಂಬಲಿಸುವ ರಾಷ್ಟ್ರೀಯ ರಂಗ ಸರಕಾರದ ಬಳಿಯಿರುವ ಪುರಾವೆಯನ್ನು ಏಕೋ ಅವರು ನೋಡ ಬಯಸುವುದಿಲ್ಲ. ಈ ಕ್ರಿಮಿನಲ್‌ಗಳು ಕಾವಿಯುಟ್ಟಿರುವುದು ಅದಕ್ಕೆ ಕಾರಣವೇ?

ರಾಷ್ಟ್ರೀಯ ನ್ಯಾಯ ಮಂಡಳಿ ತೀರ್ಪಿಗೆ ಸ್ವಾಗತ

ಅಖಿಲ ಭಾರತ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ನೌಕರರ ಸಂಘ ಸುಪ್ರೀಂ ಕೋರ್ಟಿನಲ್ಲಿ ಗ್ರಾಮೀಣ ಬ್ಯಾಂಕುಗಳ ಉದ್ಯೋಗಿಗಳ ವೇತನ ಶ್ರೇಣಿ ಮತ್ತಿತರ ಸೌಲಭ್ಯಗಳ ಬಗ್ಗೆ ೧೯೭೮ರಲ್ಲಿ ಮೊಕದ್ದಮೆ ಹೂಡಿತ್ತು. ಸುಪ್ರೀಂ ಕೋರ್ಟಿನ ಸೂಚನೆಯಂತೆ ಈ ಬಗ್ಗೆ ನೇಮಕಗೊಂಡ ರಾಷ್ಟ್ರೀಯ ನ್ಯಾಯ ಮಂಡಲಿಯಲ್ಲಿ ಏಪ್ರಿಲ್ ೩೦ ರಂದು ತನ್ನ ತೀರ್ಪನ್ನು ನೀಡಿದೆ. ವಾಣಿಜ್ಯ ಬ್ಯಾಂಕುಗಳ ಉದ್ಯೋಗಿಗಳಿಗೆ ಸಮಾನವಾದ ವೇತನ ಶ್ರೇಣಿ ನೀಡಬೇಕು ಎಂದಿದೆ. ಇದನ್ನು ಸ್ವಾಗತಿಸಿರುವ ಅಖಿಲ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟ ಈ ಮೂಲಕ ಗ್ರಾಮೀಣ ಬ್ಯಾಂಕ್ ನೌಕರರನ್ನು ಬ್ಯಾಂಕಿಂಗ್ ಉದ್ಯಮದ ಎರಡನೇ ದರ್ಜೆ ನೌಕರರೆಂಬ ಸ್ಥಿತಿ ನಿವಾರಣೆಯಾಗಿದೆ ಎಂದಿದೆ. ೧-೯-೧೯೮೭ ರಿಂದ ಪೂರ್ವಾನ್ವಯವಾಗುವಂತೆ ಈ ಸೌಲಭ್ಯ ನೀಡಬೇಕೆಂದು ನ್ಯಾಯ ಮಂಡಳಿ ಹೇಳುತ್ತಿದೆ.

ಡಿ.ವೈ.ಎಫ್.ಐ. ಬಿನ್ನಕೋಟೆ ಘಟಕದ ಸಭೆ

ಬಂಗಾರಪೇಟೆ ತಾಲ್ಲೂಕಿನ ಬಿನ್ನಕೋಟೆ ಪ್ರಾದೇಶಿಕ ಸಮಿತಿಯ ಸರ್ವಸದಸ್ಯರ ಸಭೆ ಏಪ್ರಿಲ್ ೧೪ ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷ ಎಲ್.ರಾಮಚಂದ್ರ ವಹಿಸಿದ್ದರು. ಪಿ.ಎಂ.ಅಂತೋಣಿಯವರು ಸ್ವಾಗತಿಸಿದರು. ಕಾರ್ಯದರ್ಶಿ ಮಲ್ಲೇಶಪ್ಪ ವರದಿ ಮಂಡಿಸಿದರು. ಬಿ.ಇ.ಎಂ.ಎಲ್. ನಗರದ ಸುತ್ತಲ ಹಳ್ಳಿಗಳಲ್ಲಿ ರೇಶನ್ ಕಾರ್ಡಿಗಾಗಿ, ನೈರ್ಮಲ್ಯ ಕಾಪಾಡಲು ಕಾರ್ಯಕ್ರಮ ಹಮ್ಮಿಕೊಂಡಿದ್ದ ಡಿ.ವೈ.ಎಫ್.ಐ.ನ ಚಟುವಟಿಕೆಗಳನ್ನು ವರದಿ ಗುರುತಿಸಿತು.

ಡಿ.ವೈ.ಎಫ್.ಐ. ಬಂಗಾರಪೇಟೆ ತಾಲ್ಲೂಕು ಅಧ್ಯಕ್ಷ ದಶರಥನ್, ಬಿ.ಇ.ಎಂ.ಎಲ್. ಕಾರ್ಮಿಕ ಮುಖಂಡ ಜಿ. ಅರ್ಜುನನ್, ಕೋಲಾರ ಜಿಲ್ಲಾ ಡಿ.ವೈ.ಎಫ್.ಐ. ಅಧ್ಯಕ್ಷ, ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿಯ ಜಂಟಿ ಕಾರ್ಯದರ್ಶಿ ಅಚ್ಯುತ ಹಾಗೂ ರಾಬರ್ಟ್‌ಸನ್ ಪೇಟೆ ಸಮುದಾಯ ಘಟಕದ ಅಧ್ಯಕ್ಷ ಭೂಮೀಗೌಡ ಯುವಕರನ್ನುದ್ದೇಶಿಸಿ ಮಾತನಾಡಿದರು. ರಾಜ್ಯದಲ್ಲಿ ಡಿ.ವೈ.ಎಫ್.ಐ.ನ ಸಂಸ್ಥಾಪಕರಲ್ಲೊಬ್ಬರಾದ ಹಾಗೂ ಸಿ.ಪಿ.ಐ.(ಎಂ) ರಾಜ್ಯ ಸೆಕ್ರೆಟರಿಯೆಟ್ ಸದಸ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಯುವ ಜನರು ಚಿಂತನಶೀಲತೆ ಪಡೆದುಕೊಂಡು ಒಟ್ಟಾರೆ ಎಲ್ಲಾ ಜನವಿಭಾಗಗಳ ಬಿಡುಗಡೆಯ ಹೋರಾಟದಲ್ಲಿ ಒಂದಾಗಬೇಕೆಂದು ಕರೆ ನೀಡಿದರು.

೧೩ ಮಂದಿ ಸದಸ್ಯರುಳ್ಳ ಹೊಸ ಕಾರ್ಯಕಾರಿ ಸಮಿತಿಯನ್ನು ಸಭೆ ಆರಿಸಿತು. ಎಲ್.ರಾಮಚಂದ್ರ ಅಧ್ಯಕ್ಷರಾಗಿ, ಮಲ್ಲೇಶ್ ಕಾರ್ಯದರ್ಶಿಯಾಗಿ, ಪ್ರಕಾಶ್ ಉಪಾಧ್ಯಕ್ಷರಾಗಿ, ಪಿ.ಎಂ. ಅಂತೋಣಿ ಜಂಟಿ ಕಾರ್ಯದರ್ಶಿಯಾಗಿ ಹಾಗೂ ಎ.ಬಿ. ಗಣೇಶ್ ಖಜಾಂಚಿಯಾಗಿ ಆಯ್ಕೆಗೊಂಡರು.

ಬಿ.ಇ.ಎಂ.ಎಲ್. ಸಮುದಾಯದವರಿಂದ "ಊರನ್ನು ಸುಟ್ಟ ಬೆಂಕಿ" ನಾಟಕ ಪ್ರದರ್ಶನ ನಡೆಯಿತು.

ನಡೆಯಿತು ಹೀಗೊಂದು ಸರಳ ಮದುವೆ

ಹೂವಿನಹಡಗಲಿ:-ಇಲ್ಲಿಗೆ ಸಮೀಪದ ಹಗರಿಬೊಮ್ಮನಹಳ್ಳಿ ಗ್ರಾಮದಲ್ಲಿ, ಗಂಗಾವತಿ ವೆಂಕಣ್ಣನವರ ಛತ್ರದಲ್ಲಿ ತಂಬ್ರಹಳ್ಳಿಯ ಶ್ರೀನಿವಾಸರವರ ವಿವಾಹವು ಶಾಂತಲೊಂದಿಗೆ ಅತ್ಯಂತ ಸರಳವಾಗಿ ನೆರವೇರಿತು.

ಮೊದಲು ಗಿರಿಧರರಾವ್‌ರವರು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾಹಿತಿ ಶ್ರೀ ಹೆಚ್. ಶೇಷಗಿರಿರಾವ್ ಇವರು ಇಂತಹ ಸರಳ ಮದುವೆಗಳ ಅಗತ್ಯ ಕುರಿತು ಹಾಗೂ ವಿವಾಹ ನಡೆದು ಬಂದ ದಾರಿಯ ಕುರಿತು ಮಾತನಾಡಿದರು. ಯಾವುದೇ ಆಚರಣೆಗಳಾಗಲೀ, ಸಂಪ್ರದಾಯಗಳಾಗಲೀ ಕಾಲ ಬಾಹಿರವಾದಾಗ ತಮ್ಮ ಬೆಲೆಯನ್ನು ಕಳೆದುಕೊಳ್ಳುತ್ತವೆ. ಚಲನ ಶೀಲತೆಯಿಂದ ದೂರವಾದ ಯಾವುದೂ ಬಹುಕಾಲ ನಿಲ್ಲದು ಎಂಬುದನ್ನು ಅರಿತು ಎಲ್ಲಾ ಯುವಕ ಯುವತಿಯರು ಬದಲಾವಣೆಯತ್ತ ಹೆಜ್ಜೆ ಇಡಬೇಕೆಂದು ಕರೆ ನೀಡಿದರು. ಹಾಗೂ ಬದುಕು ಅರಳುವಿಕೆಗೆ ತೊಡಕಾಗಿರುವ ವರದಕ್ಷಿಣೆ ಪದ್ಧತಿ ಹಾಗೂ ... ಹೋರಾಡಬೇಕೆಂದರು. ಇಂದಿನ ನಾಗರೀಕ ಸಮಾಜಕ್ಕೆ ತೀರಾ ಅವಶ್ಯವೆನಿಸಿರುವ ಸರಳ ವಿವಾಹಕ್ಕೆ ಎಲ್ಲರೂ ಪ್ರೋತ್ಸಾಹ ನೀಡಬೇಕೆಂದು ಒತ್ತಿಹೇಳಿದರು. ನಂತರ ಕರ್ನಾಟಕ ಪ್ರಾಂತ ರೈತ ಸಂಘದ ಶ್ರೀ ವೀರಸಂಗಯ್ಯ ಶುಭಾಷಯ ಕೋರಿದರು. ಕೊನೆಯಲ್ಲಿ ಶ್ರೀ ಕೊಟಗಿ ಮಲ್ಲಿಕಾರ್ಜುನ ವಂದಿಸಿದರು. ಈ ಮದುವೆ ಸ್ಥಳೀಯ ಸಾರ್ವಜನಿಕರ ಕುತೂಹಲ ಕೆರಳಿಸಿ ಅವರ ಬೆಂಬಲ ಪಡೆಯಿತು.

ಚೀನಾದ ಮೇಲೆ 'ರೇಡಿಯೊ ಯುದ್ಧ'

ಚೀನಾದ ಮೇಲೆ 'ರೇಡಿಯೊ ಯುದ್ಧ' ಸಾರಲು ಸಾಮ್ರಾಜ್ಯಶಾಹಿ ದೇಶಗಳ ಸರ್ಕಾರಗಳು ಚೀನಾದಿಂದ ಓಡಿಹೋಗಿರುವ ವಿದ್ಯಾರ್ಥಿಗಳ ಗುಂಪುಗಳಿಗೆ ಕುಮ್ಮಕ್ಕು ಕೊಡುತ್ತಿದೆ. ಫ್ರಾನ್ಸ್‌ನಿಂದ ಒಂದು ಹಡಗನ್ನು "ಬಾಡಿಗೆಗೆ" ಪಡೆದು ಈ ವಿದೇಶದಲ್ಲಿರುವ ವಿದ್ಯಾರ್ಥಿಗಳ ಗುಂಪು ಚೀನಾದ ಕಡೆಗೆ ಹೊರಟಿದೆ. ಇದರ ಉದ್ದೇಶ ಚೀನಾದ ಕರಾವಳಿಯಿಂದ ಸ್ವಲ್ಪದೂರದಲ್ಲಿ ಲಂಗರು ಹಾಕಿ ಚೀನಾಕ್ಕೆ ಉದ್ದೇಶಿತವಾಗಿರುವ ಅತ್ಯಧಿಕ ಶಕ್ತಿಯ ರೇಡಿಯೋ ಪ್ರಸಾರ ನಡೆಸುವುದು. ಈ ರೇಡಿಯೋ ಪ್ರಸಾರದಲ್ಲಿ ಡಿಸ್ಕೋ ಪಾಪ್ ಸಂಗೀತವಲ್ಲದೆ (ಈ ಪ್ರಚಾರಕ್ಕೆ ಜನ ಕಿವಿಗೊಡಬೇಕಿಲ್ಲ) ವಿದ್ಯಾರ್ಥಿ ಚಳುವಳಿ ಬಗ್ಗೆ ಅವರ (ಸಾಮ್ರಾಜ್ಯಶಾಹಿ ಕಣ್ಣೋಟದಿಂದ) ದೃಷ್ಟಿಯಿಂದ ಸುದ್ದಿ ನಿಲುವುಗಳನ್ನು ಪ್ರಸಾರ ಮಾಡುವುದು. ಚೀನಾದ ಜನತೆಗೆ ಪಾಶ್ಚಿಮಾತ್ಯ ದೃಷ್ಟಿಯಿಂದ ಜಗತ್ತಿನ ಬೆಳವಣಿಗೆಗಳ ಬಗ್ಗೆ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು ಅವರ ಉದ್ದೇಶ. ಈ ಹಡಗು ಸಿಂಗಾಪೂರದಲ್ಲಿ ಈಗಾಗಲೇ ಲಂಗರು ಹಾಕಿದ್ದು ಹಾಂಕಾಂಗ್ ಮೂಲಕ ಚೀನಾದ ಕರಾವಳಿ ಕಡೆಗೆ ಹೊರಟಿದೆ.

ಒಂದು ದೇಶದ ಪ್ರದೇಶಗಳ ಮೇಲೆ ಯಾವುದೇ ಒಪ್ಪಂದ ಕರಾರುಗಳಿಲ್ಲದೆ ಅಲ್ಲಿಯ ಸರ್ಕಾರದ ಮರ್ಜಿಗೆ ವಿರುದ್ಧವಾಗಿ ರೇಡಿಯೋ ಪ್ರಸಾರ ಮಾಡುವುದು ವಿಶ್ವಸಂಸ್ಥೆಯ ನಿಯಮಗಳಿಗೆ ವಿರುದ್ಧವಾದದ್ದು. ಇಂತಹ ಅಂತರ್ರಾಷ್ಟ್ರೀಯ ಕಾನೂನು ಬಾಹಿರ ಚಟುವಟಿಕೆಗಳಿಗೆ ಕುಮ್ಮಕ್ಕು ಕೊಟ್ಟಿದ್ದಕ್ಕೆ, ಚೀನಾ ಸರ್ಕಾರ ಫ್ರಾನ್ಸ್, ಸಿಂಗಪೂರ್ ಮುಂತಾದ ಸರ್ಕಾರಗಳಿಗೆ ಬಲವಾದ ಪ್ರತಿಭಟನೆ ಸಲ್ಲಿಸಿದೆ. ಹಾಂಗ್‌ಕಾಂಗ್ ಸರ್ಕಾರಕ್ಕೆ ಈ ಹಡಗಿಗೆ ಯಾವುದೇ ಸವಲತ್ತು ಕೊಡದಂತೆ ಕೇಳಿಕೊಂಡಿದೆ.

ಈ ನಡುವೆ ಟಿಬೆಟ್‌ನಲ್ಲಿ ಸಾಮಾಜಿಕ ಭದ್ರತೆ ಪುನಃ ಸ್ಥಾಪಿತವಾಗಿರುವುದರಿಂದ ಚೀನಾ ಸರ್ಕಾರ ಮಿಲಿಟರಿ ಆಡಳಿತ ಕೊನೆಗೊಳಿಸಿ, ಸೈನ್ಯ ವಾಪಸು ತೆಗೆದುಕೊಂಡಿದೆ.

ನೇಪಾಳದಲ್ಲಿ ಭದ್ರ ಮಧ್ಯಕಾಲೀನ ಸರ್ಕಾರ

ನೇಪಾಳದಲ್ಲಿ ಕಾಂಗ್ರೆಸ್ ಮತ್ತು ಸಂಯುಕ್ತ ವಾಮರಂಗದ ಸಮ್ಮಿಶ್ರ ಮಧ್ಯಕಾಲೀನ ಸರ್ಕಾರ ಮೊದಲಿನ ದಿನಗಳ ಅಭದ್ರತೆ ಸಮಸ್ಯೆಗಳನ್ನು ಎದುರಿಸಿ ಭದ್ರತೆಯತ್ತ ಆತ್ಮವಿಶ್ವಾಸದಿಂದ ಹೆಜ್ಜೆ ಇಡುತ್ತಿದೆ. ಪೋಲೀಸರ ದಂಗೆ, ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿರುವ ತೀವ್ರಗಾಮಿ ಬಲ ಮತ್ತು ಎಡಪಂಥೀಯರಿಂದ ಹಿಂಸಾಚಾರ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಹುಟ್ಟಿನಲ್ಲೇ ಹೊಸಕಿ ಹಾಕಲು ಪ್ರಯತ್ನಿಸಿದರು. ಹಳೆಯ ಪಂಚಾಯತಿ ವ್ಯವಸ್ಥೆಯ ಪ್ರತಿಗಾಮಿ ಬೆಂಬಲಿಗ ಪ್ರತಿರೋಧವನ್ನು ಮುರಿದು ಸರ್ಕಾರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭದ್ರ ಬುನಾದಿಯ ಮೇಲೆ ಹಾಕಿದೆ. ಅಕ್ಟೋಬರ್ ಹೊತ್ತಿಗೆ ಬಹು ಪಕ್ಷೀಯ ಪ್ರಜಾಪ್ರಭುತ್ವದ ಆಧಾರದ ಮೇಲೆ ಚುನಾವಣೆಗಳನ್ನು ನಡೆಸಲು ಸಿದ್ಧತೆ ನಡೆಸಿದೆ. ಹೊಸ ವ್ಯವಸ್ಥೆಯಲ್ಲಿ ರಾಜನ ಪಾತ್ರದ ಬಗ್ಗೆ ಒಂದು ಒಮ್ಮತ ಮೂಡಿಬರುತ್ತಿದೆ ರಾಜ ನಾಮಮಾತ್ರ ಸಂವಿಧಾನಿಕ ಮುಖ್ಯಸ್ಥನಾಗಿರಬೇಕೆಂದು ದೇಶಕ್ಕೆ ಒಂದು ಸಂವಿಧಾನ ಬರೆಯಲು ಕ್ರಮಕ್ಕೆಗೊಳ್ಳಬೇಕಾಗುತ್ತಿದೆ. ಭಾರತದೊಡನೆ ಸಂಬಂಧ ಸಾಮಾನ್ಯಗೊಳಿಸಲು, ವ್ಯಾಪಾರ ವಾಣಿಜ್ಯ ಪುನಸ್ಥಾಪಿಸಲು ನೇಪಾಳ ಸರ್ಕಾರ ಕ್ರಮಕ್ಕೆಗೊಳ್ಳುತ್ತಿದೆ.

ಲಿಥುವೇನಿಯಾ ರಾಜಿಯ ಕಡೆಗೆ?

ಲಿಥುವೇನಿಯಾ ಸ್ವಾತಂತ್ರ್ಯವನ್ನು ಏಕಪಕ್ಷೀಯ ವಾಗಿ ಘೋಷಿಸಿಕೊಂಡದ್ದು ಸೋವಿಯತ್ ಕಾನೂನು ಗಳಿಗೆ ವಿರುದ್ಧ, ಇದನ್ನು ವಾಪಸು ಪಡೆಯಬೇಕು. ಆಮೇಲೆ ಮಾತುಕತೆ ನಡೆಸಬಹುದು, ಎಂಬ ಸೋವಿಯಟ್ ಅಧ್ಯಕ್ಷ ಗೋರ್ಬಚೇವ್‌ರ ಎಚ್ಚರಿಕೆ ಯನ್ನು ಈವರೆಗೆ ನಿರ್ಲಕ್ಷಿಸಿದೆ. ಇದರಿಂದಾಗಿ ಹಲವಾರು ಆರ್ಥಿಕ ಸವಲತ್ತುಗಳನ್ನು ಸೋವಿಯತ್ ಸರ್ಕಾರ ವಾಪಸ್ಸು ತೆಗೆದುಕೊಂಡಿದೆ. ಲಿಥುಮೇನಿ ಯಾಕ್ಕೆ ಪೆಟ್ರೋಲ್, ಡೀಸಲ್, ಪ್ರಾಕೃತಿಕ ಅನಿಲ ಸೋವಿಯತ್ ಸರ್ಕಾರದ ಈ ಕ್ರಮಗಳ ವಿರುದ್ಧ ಪಾಶ್ಚಿಮಾತ್ಯ ದೇಶಗಳ ಬೆಂಬಲ ಸಿಗಬಹುದು ಎಂಬುದು ಲಿಥುಮೇನಿಯಾ ಸರ್ಕಾರದ ನಿರೀಕ್ಷೆಯಾಗಿತ್ತು. ಆದರೆ ಇದು ಹುಸಿಯಾಗಿದೆ. ಅಮೇರಿಕಾದ ಅಧ್ಯಕ್ಷ ಜಾರ್ಜ್ ಬುಷ್ ಸೋವಿಯತ್ ಸರ್ಕಾರದ ಜತೆ ಮಾತುಕತೆ, ಒಪ್ಪಂದದ ಮೇಲೆ ಸಮಸ್ಯೆ ಬಗೆಹರಿಸಬೇಕೆಂದು 'ಬುದ್ಧಿವಾದ' ಹೇಳಿದ್ದಾರೆ. ಫ್ರಾನ್ಸ್ ಮತ್ತು ಜರ್ಮನ್ ಸರ್ಕಾರಗಳೂ ಎರಡು ವರ್ಷಗಳವರೆಗೆ ಸ್ವಾತಂತ್ರ್ಯ ಘೋಷಣೆಯನ್ನು ಮುಂದೂಡಬೇಕೆಂದು, ಸೋವಿಯತ್ ಸರ್ಕಾರದ ಜತೆ ಮಾತುಕತೆ ನಡೆಸಬೇಕೆಂದು ಸಲಹೆ ಮಾಡಿದೆ. ಪಾಶ್ಚಿಮಾತ್ಯ ದೇಶಗಳು ದಿಗ್ಬಂಧನದ ಬೆದರಿಕೆಯ ಮೂಲಕ ಸೋವಿಯತ್ ಸರ್ಕಾರ ತನ್ನ ನಿಲುವು ಬದಲಿಸುವಂತೆ ಮಾಡಬಹುದೆಂಬ ಲಿಥುಮೇನಿಯಾ ಸರ್ಕಾರದ ಲೆಕ್ಕಾಚಾರ ತಲೆಕೆಳಗಾಗಿದೆ. ಇದರಿಂದಾಗಿ ಲಿಥುಮೇನಿಯಾದ ಸರ್ಕಾರ, ಆಳುವ ಪಕ್ಷ ಮತ್ತು ಜನ ವಿಭಾಗಗಳಲ್ಲಿ 'ಸಂಪೂರ್ಣ ಸ್ವಾತಂತ್ರ್ಯ'ಕ್ಕೆ ಬೆಂಬಲ ಕಡಿಮೆಯಾಗಿದೆ. ಹಲವು ಪಾಶ್ಚಿಮಾತ್ಯ ಬ್ಯಾಂಕುಗಳು ಲಿಥುಮೇನಿಯಾ ಆರ್ಥಿಕವಾಗಿ ಸ್ವತಂತ್ರವಾಗಿರಬಲ್ಲ ಒಂದು ಪ್ರದೇಶವಲ್ಲ ಎಂದು ಅಭಿಪ್ರಾಯ ಪಟ್ಟಿವೆ. ಸೋವಿಯತ್ ಸರ್ಕಾರದ ಜತೆ ರಾಜಿಗೆ ಅನುವು ಮಾಡುವಂತೆ ಜನಾಭಿಪ್ರಾಯ ಮೂಡುತ್ತಿದೆ.

ಸೋವಿಯತ್ ಪಾರ್ಲಿಮೆಂಟು ಯಾವುದೇ ಗಣತಂತ್ರ ಬೇರ್ಪಡಬೇಕಾದರೆ ಯಾವ ಕ್ರಮಗಳನ್ನು ಪಾಲಿಸಬೇಕು ಎಂಬ ಬಗ್ಗೆ ಒಂದು ಕಾನೂನು ಈಗಾಗಲೇ ಮಾಡಿದೆ. ಇದರ ಪ್ರಕಾರ ಲಿಥ್ವೇನಿಯಾ ನಡೆದುಕೊಳ್ಳ ಬೇಕಾಗುತ್ತದೆ.

ಒನ್‌ಬೈಟೂ ಐಕ್ಯತೆ ಬೇಡ!

ಪೂರ್ವಜರ್ಮನಿಯಲ್ಲಿ ಚುನಾವಣೆ ನಡೆದು ಬಲಪಂಥೀಯಶಕ್ತಿಗಳು ಅಧಿಕಾರಕ್ಕೆ ಬಂದಾಗಿನಿಂದ, ಜರ್ಮನ್ ಒಕ್ಕತೆಯ ಬಗ್ಗೆ ಮಾತುಕತೆಗಳು ಚುರುಕಿನಿಂದ ಆರಂಭವಾಗಿದೆ. ಇದು 'ನಾಲ್ಕು ಎರಡು' ಮಾತುಕತೆಗಳು ಎಂದು ಪ್ರಸಿದ್ಧವಾಗಿವೆ. ಹಿಟ್ಲರ್‌ನ ಜರ್ಮನಿಯ ಪರಾಜಯದ ನಂತರ, ಜರ್ಮನಿಯ ಎಲ್ಲ ಪ್ರಶ್ನೆಗಳಲ್ಲಿ ಕಾನೂನುಬದ್ಧವಾಗಿ ನಾಲ್ಕು ವಿಜೇತ ರಾಷ್ಟ್ರಗಳಿಗೆ ಅಮೇರಿಕ, ಸೋವಿಯತ್ ಒಕ್ಕೂಟ, ಫ್ರಾನ್ಸ್ ಬ್ರಿಟನ್ ಮುಖ್ಯ ಪಾತ್ರವಿದೆ. ಈ ನಾಲ್ಕುದೇಶಗಳು ಮತ್ತು ಎರಡು ಜರ್ಮನ್ ದೇಶಗಳ ಪ್ರತಿನಿಧಿಗಳು ಈ ಮಾತುಕತೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಎರಡು ಜರ್ಮನ್ ದೇಶಗಳು ಐಕ್ಯಗೊಳ್ಳುವುದು ಹೆಚ್ಚುಕಡಿಮೆ ಖಚಿತವಾಗಿದ್ದರೂ, ಯಾವ ಷರತ್ತುಗಳ ಮೇಲೆ ಯಾವ ನಿಲುವುಗಳ ಆಧಾರದ ಮೇಲೆ ಎಂಬ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆ. ಪಾಶ್ಚಿಮಾತ್ಯ ದೇಶಗಳು ಮತ್ತು ಸೋವಿಯತ್‌ಗಳ ನಡುವೆ ಮಾತ್ರವಲ್ಲ, ಎರಡು ಜರ್ಮನಿಗಳ ಬೇರೆ ಬೇರೆ ರಾಜಕೀಯ ಪಕ್ಷಗಳು, ಗುಂಪುಗಳ ನಡುವೆ ಸಹ ಸಾಮ್ರಾಜ್ಯಶಾಹಿ ಪ್ರಚಾರಯಂತ್ರ ಎಷ್ಟೇ ಅದನ್ನು ಅಮುಖ್ಯವೆಂದು ಪ್ರತಿಬಿಂಬಿಸಲು ಪ್ರಯತ್ನಿಸಿದರೂ, ಐಕ್ಯತೆಯ ಸಮಸ್ಯೆಗಳು ಸಾಮ್ರಾಜ್ಯಶಾಹಿ ವಲಯಗಳಿಗೂ ತಲೆನೋವಾಗಲು ಆರಂಭಿಸಿವೆ ಎನ್ನುವುದು ಸ್ಪಷ್ಟ. ಜರ್ಮನ್ ಐಕ್ಯತೆ ಸಮಾಜವಾದದ ಮೇಲೆ ಬಂಡವಾಳಶಾಹಿ ವಿಜಯ ಎಂಬ ಅನ್ನಿಸಿಕೆ ಅಷ್ಟೇನೂ ನಿಜವಲ್ಲ ಎನ್ನುವುದು ಮೆಲ್ಲಗೆ ಬೆಳಕಿಗೆ ಬರುತ್ತಿದೆ.

ಎರಡು ವಿಷಯಗಳ ಬಗ್ಗೆ ಒಮ್ಮತ ಇನ್ನೂ ಮೂಡಿ ಬಂದಿಲ್ಲ. ಒಂದನೆಯದಾಗಿ ಎರಡು ಜರ್ಮನಿಗಳ ಆರ್ಥಿಕ ವ್ಯವಸ್ಥೆಯನ್ನು ಯಾವ ನೀತಿಗಳ ಆಧಾರದ ಮೇಲೆ ಒಗ್ಗೂಡಿಸುವುದು ಎಂಬ ಬಗ್ಗೆ- ಒಂದು ಪಶ್ಚಿಮ ಜರ್ಮನಿಯ ಮಾರ್ಕ್ (ನಾಣ್ಯ), ಎರಡು ಪೂ. ಜರ್ಮನಿಯ ಮಾರ್ಕ್‌ಗೆ ಸಮ ಎಂಬ ಆಧಾರದ ಮೇಲೆ ಇದು ನಡೆಯಬೇಕು ಎಂದು ಬಯಸುತ್ತದೆ. ಇದಕ್ಕೆ ಪೂರ್ವಜರ್ಮನಿಯಲ್ಲಿ ಪ್ರಬಲ ವಿರೋಧವಿದೆ. ಇದರ ವಿರುದ್ಧ ಭಾರಿ ಪ್ರದರ್ಶನಗಳು ಕಂಡು ಬಂದಿವೆ. ಈ ವಿನಿಮಯದರದ ಮೇಲೆ ಪೂ.ಜರ್ಮನಿ ಕಾರ್ಮಿಕರ ವೇತನ, ಪೆನ್‌ಶನ್, ಆಸ್ತಿಬೆಲೆ ಹೊಂದಿಕೊಂಡಿದೆ. ಇಷ್ಟೇ ಅಲ್ಲ, ಪೂ. ಜರ್ಮನಿಯಲ್ಲಿದ್ದ ಕಡಿಮೆ ಬಾಡಿಗೆ ಪೆನ್‌ಶನ್, ಹೆಚ್ಚು ಕಡಿಮೆ ನಿಶುಲ್ಕ ಶಿಕ್ಷಣ ಮತ್ತಿತರ ಸಾಮಾಜಿಕ ಭದ್ರತಾ ಕ್ರಮಗಳು ಕಡಿತಗೊಳ್ಳಬಹುದು ಎಂಬ ಭಯ ಇದೆ. ಪ.ಜರ್ಮನಿಗೆ ವಲಸೆ ಹೋಗಿರುವ ಪೂ.ಜರ್ಮನಿ ಜನ ಸಹ ಅದು ಸ್ವರ್ಗ ಅಲ್ಲ ಎಂದು ಮನಗಂಡಿದ್ದಾರೆ. ಅವರು ಅದನ್ನು ಸುಮ್ಮನೆ ಬಾಯಿಮುಚ್ಚಿ ಅಂಗೀಕರಿಸಿಲ್ಲ. ಹೆಚ್ಚಿನ ವೇತನ, ಕಡಿಮೆ ಮನೆ ಬಾಡಿಗೆ, ಇತರ ಸಾಮಾಜಿಕ ಭದ್ರತಾ ಕ್ರಮಗಳ ಬೇಡಿಕೆ ಮೇಲೆ ಇತ್ತೀಚೆಗೆ ಪಶ್ಚಿಮ ಬರ್ಲಿನ್‌ನಲ್ಲಿ ೨೦ ಸಾವಿರ ಜನ ಪ್ರದರ್ಶನ ನಡೆಸಿದರು. ಎರಡನೆಯದು ಸಂಯುಕ್ತ ಜರ್ಮನಿ ನಾಟೋದ ಸದಸ್ಯರಾಗಿರಬೇಕೆ ಅಥವಾ ತಟಸ್ಥ ದೇಶವಾಗಬೇಕೆ, ಎಂಬುದರ ಬಗ್ಗೆ ಸಂಯುಕ್ತ ಜರ್ಮನಿ ತಟಸ್ಥರಾಗಿದ್ದರೆ, ಅದು ಯುರೋಪಿನ ಎಲ್ಲಾ ದೇಶಗಳ ಭದ್ರತೆ, ಶಾಂತಿಗೆ ಪೂರಕ ಎಂದು ಸೋವಿಯತ್ ನಿಲುವು.

ಬಂಡವಾಳ ಶಾಹಿ ನಾರುತ್ತಿರುವ ವ್ಯವಸ್ಥೆ

ಸಮಾಜವಾದದ ಸಮಸ್ಯೆಗಳನ್ನು ದುರುಪಯೋಗಪಡಿಸಿಕೊಂಡು, ಸಮಾಜವಾದದ ವಿರುದ್ಧ ಬಲಾಬಲಗಳನ್ನು ಹೆಚ್ಚಿಸಲು ಸಾಮ್ರಾಜ್ಯಶಾಹಿ ಪ್ರಯತ್ನಿಸುತ್ತಿದ್ದರೂ, ಬಂಡವಾಳಶಾಹಿ ಉತ್ತಮ ವ್ಯವಸ್ಥೆ ಎಂದು ಕೋರಿಸಲು ಅಬ್ಬರದ ಪ್ರಚಾರ ನಡೆಸುತ್ತಿದ್ದ... ಅದು ಕೊಳೆತು ನಾರುತ್ತಿರುವ ವ್ಯವಸ್ಥೆ ಎಂಬುದ... ಮುಚ್ಚಿಡಲಾಗುತ್ತಿಲ್ಲ. ಮೂರನೇ ಜಗತ್ತಿನ... ಸಾಮ್ರಾಜ್ಯಶಾಹಿ 'ಶೋರೂಂ' ದ.ಕೊರಿಯಾದಲ್ಲಿ ... ಮುಷ್ಕರಗಳು ಆರಂಭವಾಗಿವೆ. ಆ ದೇಶದ ಅತಿದೊ... ಹಡಗು ನಿರ್ಮಾಣದ ಬಂದರಿನಲ್ಲಿ ಭಾರೀ ಮುಷ್ಕರಗ... ನಡೆಯುತ್ತಿದೆ. ಈ ಕಾರ್ಮಿಕರು ತಮ್ಮ ಪ್ರಜಾಪ್ರಭು... ಶಕ್ತಿಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಇ... ಬೆಂಬಲಾರ್ಥವಾಗಿ ವಿದ್ಯಾರ್ಥಿಗಳು ಬೀದಿಗ... ಇಳಿದಿದ್ದಾರೆ. ದ. ಕೋರಿಯಾದ ಈ ಚಳುವಳಿಯ... ಹತ್ತಿಕ್ಕಲು ನಡೆಸುತ್ತಿರುವ ಬರ್ಬರ ದಮನ ಬ... ಕಾಳಗಕ್ಕೆಡೆಕೊಡುತ್ತಿದೆ. ದಿನಗಟ್ಟಲೆ ಟಿವಿ ರೇಡಿಯೋ... ಸ್ಟೇಶನ್ ಸುತ್ತ ಮಾನವ ಸರಪಣಿ ನಿರ್ಮಿಸಲಾಗಿ... ಬಂಡವಾಳಶಾಹಿ ಸೂಚಕಗಳ ಪ್ರಕಾರವೇ ದ. ಕೊರಿಯ... 'ಸಮೃದ್ಧ' ವೇಗವಾಗಿ ಕುಸಿಯುತ್ತಿದೆ.

ನ್ಯೂಯಾರ್ಕ್‌ನ ಹೆಸರಾಂತ ಮೂರು ಆಸ್ಪತ್ರೆಗ... ನಡೆಸಲಾದ ವೈದ್ಯಕೀಯ ತಪಾಸಣೆಯಲ್ಲಿ, ಅ... ಒಳಗಾದ ಹಲವಾರು ಯುವಕರಲ್ಲಿ ನಾಲ್ವರಲ್ಲಿ ಒಬ್ಬ... AIDS ನಿಂದ ಆಗಲೇ ಪೀಡಿತರಾಗಿದ... ಕಂಡುಬಂತು. ಅಮೆರಿಕನ್ ಸಮಾಜ ಶ... ಕೊಳೆಯಲು, ನಾರಲು ಆರಂಭಿಸಿದೆ. ಇತ್ತೀ... ಅಮೇರಿಕದ ಉನ್ನತ ವೈದ್ಯಕೀಯ ಅಧಿಕಾರಿ ಸರ್ಜ... ಜನರಲ್ ಸಿಗರೇಟ್ ಕಂಪನಿಗಳ ಆರೋಗ್ಯದ ... ದಿವ್ಯತಿರಸ್ಕಾರದ ಬಗ್ಗೆ ಯಾವುದೇ ವ್ಯವಸ್ಥೆ ನ... ಪಡಬೇಕಾದ ಮಾತುಗಳನ್ನಾಡಿದ್ದಾರೆ. ಕ್ಯಾಲಿಫೋರ್ನಿ... ರಾಜ್ಯ ಸಿಗರೇಟು ಸೇವನೆಯ ವಿರುದ್ಧ ತೀವ್ರ ಪ್ರ... ಕೈಗೊಂಡಿದ್ದು, ಇದರಿಂದ ಯುವಕರಲ್ಲಿ ಸಿಗರೇ... ಸೇವನೆ ಕಡಿಮೆಯಾಗಿದೆ. ಇದರ ಹಾನಿಯ... ತಡೆಯಲು ಸಿಗರೇಟು ಕಂಪನಿಗಳು ಮಹಿಳೆಯ... ಕರಿಯರು ಅದರಲ್ಲೂ ಕರಿಯ ಮಹಿಳೆಯರೂ ... ಮೂರನೇ ಜಗತ್ತಿನ ಜನತೆಯತ್ತ ಉದ್ದೇಶಿತವಾಗಿ ... ಸಿಗರೇಟು ಬ್ರಾಂಡುಗಳನ್ನು, ಏಕಪ್ರಚಾರವನ್ನು ದ... ಪ್ರಮಾಣದಲ್ಲಿ ಆರಂಭಿಸಿದೆ. ಸರ್ಕಾರಿ ಆರ... ವ್ಯವಸ್ಥೆಯೂ ಪ್ರಚಾರ ಕಂಪನಿಗಳ ಅಕ್ರಮ ಪ್ರಚಾ... ಮುಂದೆ ಪೀಚು ಮತ್ತು ಸಿಗರೇಟು ಕಂಪನಿಗಳ ... ಪ್ರಚಾರ ಕಾನೂನು ಬಾಹಿರವಾದರೂ ಏನೂ ಮಾ... ಆಗುತ್ತಿಲ್ಲ ಎಂದು ಸರ್ಜನ್ ಜನರಲ್ ವಿಷಾದಿಸಿದ್ದಾರೆ.



ಲಿಥುವೇನಿಯಾದಲ್ಲಿ ಸೋವಿಯತ್ ಪರ ಬೃಹತ್ ರ್‍ಯಾಲಿ

ಕೋಲಾರದಲ್ಲಿ ಬಿ.ಟಿ.ಆರ್. ಗೆ ಶ್ರದ್ಧಾಂಜಲಿ

'ಸಿ.ಪಿ.ಐ. (ಎಂ) ಕೋಲಾರ ಜಿಲ್ಲಾ ಸಮಿತಿಯು ಏ ೨೨ ರಂದು ಕೋಲಾರದ ಪುರಭವನದಲ್ಲಿ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿತ್ತು ಈ ಸಭೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಹಾಜರಿದ್ದರು.

ಕಾ|| ಕೆ.ಎಂ. ವೆಂಕಟೇಶ, ಜಿಲ್ಲಾ ಕಾರ್ಯದರ್ಶಿ, ಸ್ವಾಗತಿಸಿದ ಈ ಸಭೆಯಲ್ಲಿ ಕಾ||ಆರ್.ವೆಂಕಟರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾ|| ಎ. ಜಯರಾಂರವರು ಮಂಡಿಸಿದ ಶ್ರದ್ಧಾಂಜಲಿ ನಿರ್ಣಯವನ್ನು ಅಂಗೀಕರಿಸಿ ೨ ನಿಮಿಷ ಮೌನಾಚರಣೆ ಮಾಡಿ ಕಾ|| ಬಿಟಿಆರ್‌ಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸ್ಥಳೀಯ ಜನತಾದಳದ ಮುಖಂಡ, ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀಯುತ ಸುದರ್ಶನ್ ಮತ್ತು ಶ್ರೀಯುತ ವೆಂಕಟಗಿರಿಯಪ್ಪನವರು ಮಾತನಾಡಿ, ಕಾ|| ಬಿಟಿಆರ್‌ರವರು ತಮ್ಮ ಜೀವನದುದ್ದಕ್ಕೂ ನಂಬಿಕೊಂಡುಬಂದ ಕಮ್ಯುನಿಸ್ಟ್ ಧ್ಯೇಯ ಧೋರಣೆಗಳನ್ನು ಅಳವಡಿಸಿಕೊಂಡು ಬಡವರ ಏಳಿಗೆಗಾಗಿ ತಮ್ಮ ಕೊನೆಯುಸಿರು ಇರುವವರೆಗೂ ಹೋರಾಡಿದ್ದಾರೆ. ಜಾಗತಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಬಿಕ್ಕಟ್ಟು ತಲೆದೋರಿರುವ ಇಂತಹ ಸಂದರ್ಭ ದಲ್ಲಿ ಅವರ ಮಾರ್ಗದರ್ಶನ ಅಗತ್ಯವಿತ್ತು ಎಂದು ಹೇಳಿದರು ಇವರ ಕೃತಿಗಳು ಮುಂದಿನ ಯುವಕರಿಗೆ ಮಾರ್ಗದರ್ಶನ ವಾಗಲಿ ಎಂದು ಹೇಳಿ ಕಮ್ಯುನಿಸ್ಟ್ ಸಿದ್ಧಾಂತ ವಿಶಾಲಜನ ಸಮುದಾಯದ ಮಧ್ಯೆ ಬೆಳೆಯಲಿ ಎಂದು ಹಾರೈಸಿದರು.

ಕಾ| ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಎಡ ಪಂಥ ಸಾಹಸವಾದದ ಬಗ್ಗೆ ಬರೆದ ಪುಸ್ತಕವನ್ನು ಪರಿಚಯಿಸುತ್ತಾ ಎಡಪಂಥವಾದದ ಇತಿಹಾಸದ ಬಗ್ಗೆ ಭಾರತದಲ್ಲಿ ಈ ಕ್ರಾಂತಿಯ ದಾರಿತಪ್ಪಿಸುವ ನಕ್ಸಲೈಟ್ ಗುಂಪುಗಳ ಚಟುವಟಿಕೆಗಳನ್ನು, ವಾದಗಳನ್ನು ವಿಮರ್ಶಿಸಿದರು.

ನಂತರ ಮಾತನಾಡಿದ ಕಾ| ಜಿ.ಎಸ್. ನಾಗರಾಜ್‌ರವರು ಕಾ|ಬಿಟಿಆರ್‌ರವರ ಪುಸ್ತಕ "ಜಾತಿ,ವರ್ಗ, ಮತ್ತು ಆಸ್ತಿ ಸಂಬಂಧ" ದ ಬಗ್ಗೆ ತಿಳಿಸಿ, ದೇಶದ ಕಾರ್ಮಿಕ ವರ್ಗ ಮತ್ತು ರೈತವರ್ಗವು ಬಂಡವಾಳ ಶಾಹಿಯನ್ನು ಮತ್ತು ಭೂಮಾಲಿಕರನ್ನು ಎದುರಿಸಬೇಕಾಗುವುದನ್ನು ತಿಳಿಸಿದರು. ಜಾತಿ ಪದ್ಧತಿಯಿಂದಾಗುತ್ತಿರುವ ವಿಪತ್ತುಗಳ ಬಗ್ಗೆ ಮಾತನಾಡಿ, ಎಲ್ಲಾ ಜಾತಿಯ ಬಡವರಿಗೆ ವಿಮೋಚನೆ ಸಿಗಬೇಕಾದರೆ ಎಲ್ಲರಿಗೂ ಭೂಮಿ ಸಿಗಬೇಕು, ಇದು ತೀವ್ರವಾದ ಭೂ ಸುದಾರಣೆಯಾದರೆ ಮಾತ್ರ ಸಾಧ್ಯ ಎಂಬುದನ್ನು ಒತ್ತಿಹೇಳಿದರು. ಜಾತಿ ಪದ್ಧತಿ ವಿನಾಶವಾಗಬೇಕಾದರೆ, ಹರಿಜನರಿಗೆ ಮಲ ತಿನಿಸುತ್ತಿರುವ ಘಟನೆಗಳು ನಿಲ್ಲಬೇಕಾದರೆ, ರೈತ ಸಂಘವನ್ನು ಬಲವಾಗಿ ಸಂಘಟಿಸುವ ಕೆಲಸವನ್ನು ಮಾಡಬೇಕಾಗಿರುವ ಅವಶ್ಯಕತೆಯನ್ನು ತಿಳಿಸಿದರು. ಇದಕ್ಕೆ ಉದಾಹರಣೆಯಾಗಿ ಪ. ಬಂಗಾಳ, ಮತ್ತು ಕೇರಳದ ರೈತ ಸಂಘಟನೆಗಳನ್ನು ಪ್ರಸ್ತಾಪಿಸಿ ... ಇಂತಹ ಘಟನೆಗಳು ನಡೆಯದೆ ಇರ... ದನ್ನು ತಿಳಿಸಿದರು. ರೈತರನ್ನು ಸ... ಟಿಸುವ ಕೆಲಸವನ್ನು ಕಾರ್ಮಿಕ ವರ್ಗ... ತೀವ್ರಗೊಳಿಸಬೇಕೆಂದು ಕರೆಯಿತ್ತರು.

ಕೊನೆಯಲ್ಲಿ ಪಕ್ಷದ ಜಿಲ್ಲಾ ಸ... ಸದಸ್ಯ ಕಾಂ. ಜಿ.ವಿ. ಅಶ್ವಥನಾರಾಯ... ರೆಡ್ಡಿಯವರು ವಂದನಾರ್ಪಣೆ ಮಾಡಿದರು.

ಹಾವೇರಿ: ಸಿ.ಪಿ.ಐ.(ಎಂ)ನ ಹಾ... ತಾಲ್ಲೂಕಿನಲ್ಲಿ ಇತ್ತೀಚೆಗೆ ನಿಧನ... ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಸದಸ್ಯ ... ಬಿ.ಟಿ. ರಣದಿವೆಯವರಿಗೆ ... ಕಾರ್ಯಕರ್ತರು ಸಭೆ ಸೇರಿ ... ಹೃತ್ಪೂರ್ವಕ ಶ್ರದ್ಧಾಂಜಲಿ ಅರ್ಪಿಸಿದರು. ... ರುದ್ರಪ್ಪ ಈ ಸಭೆಯ ಅಧ್ಯಕ್ಷತೆ ವಹಿಸಿದ್ದ... ಕಾಂ.ಚನ್ನಬಸಪ್ಪ ಸಾಲವಾಡಗಿ ವಂದಿಸಿದರು.

ಪಿ.ಐ.(ಎಂ) ಪೊಲಿಟ್ ಬ್ಯೂರೋ ಒತ್ತಾಯ
ಬೆಲೆಯೇರಿಕೆ ತಡೆಯಲು ತುರ್ತುಕ್ರಮ ಅಗತ್ಯ

ಪುಟ 1 ರಿಂದ

ಹಾಗೂ ಜಿಲ್ಲಾ ಮಟ್ಟಗಳಲ್ಲಿ ಸರ್ವಪಕ್ಷ ಅಭಿಪ್ರಾಯಪಟ್ಟಿದೆ. ಮುಗ್ಧರ ಕೊಲೆ ಅವ್ಯಾಹತವಾಗಿ ಸಾಗಿದೆ. ವಿಶ್ವಸಂಸ್ಥೆಯ ಆಶ್ರಯದಲ್ಲಿ ಪಂಜಾಬಿನಲ್ಲಿ ಜನಮತ ಸಂಗ್ರಹಣೆ ಮಾಡಬೇಕೆಂಬ ಸಿಮ್ರನ್‌ಜಿತ್ ಸಿಂಗ್ ಮಾನ್‌ರವರ ಇತ್ತೀಚಿನ ಹೇಳಿಕೆ ಸಿಖ್ ಮತ್ತು ಪಂಜಾಬೀ ಜನತೆಯ ಹಿತಾಸಕ್ತಿಗಳಿಗೆ ಭಾದಕವಾದ ರಾಷ್ಟ್ರವಿರೋಧಿ ಹೇಳಿಕೆ ಎಂದು ಖಂಡಿಸಿದೆ. ಪ್ರತ್ಯೇಕತಾವಾದ, ಭಯೋತ್ಪಾದಕತೆಯ ವಿರುದ್ಧ ದಿಟ್ಟ ನಿಲುವು ತಳೆದು ಶಾಂತಿ ಮತ್ತು ಸುಭದ್ರತಾ ಸಮಿತಿಗಳನ್ನು ಸರ್ಕಾರ ರಚಿಸಬೇಕೆಂದೂ ಈಗಿನ ಸಮಸ್ಯೆಗಳನ್ನು ಉಂಟು ಮಾಡಿದ ಸಂಗತಿಗಳತ್ತ ಕ್ರಮ ಕೈಗೊಳ್ಳಬೇಕೆಂದೂ ಪೊಲಿಟ್‌ಬ್ಯೂರೋ ಹೇಳಿದೆ.

ಅಸ್ಸಾಂ ಈಶಾನ್ಯ ರಾಷ್ಟ್ರೀಯ ಐಕ್ಯತೆಗೆ ಬೆದರಿಕೆ

ಅಸ್ಸಾಂನಲ್ಲಿ ಯು.ಎಲ್.ಎಫ್.ಎ.ದ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚುತ್ತಿರುವುದರ ಬಗ್ಗೆ ಪೊಲಿಟ್‌ಬ್ಯೂರೋ ತೀವ್ರ ಆತಂಕ ವ್ಯಕ್ತಪಡಿಸಿದೆ. ವ್ಯಾಪಾರೀ ಸಮುದಾಯವನ್ನು ಅಲ್ಪಸಂಖ್ಯಾತ ಕೋಮುಗಳನ್ನು ಬೆದರಿಸಿ ಯು.ಎಲ್.ಎಫ್.ಎ. [illegible]ಂಗ್‌ಗಳು ಬೆದರಿಕೆ, ಅಪಹರಣಗಳ ಮೂಲಕ ಅಪಾರ ಹಣ ಕಿತ್ತುಕೊಳ್ಳುತ್ತಿದೆ. ಅವರ ಬ್ಲಾಕ್‌ಮೇಲ್‌ಗಳನ್ನು ಪ್ರತಿರೋಧಿಸಿದವರನ್ನು ಕೊಂದಿವೆ. ತಮ್ಮ ಹಲ್ಲೆಗಳನ್ನು ತೋಟ ವ್ಯವಸ್ಥಾಪಕ ಸಿಬ್ಬಂದಿಯ ಮೇಲೂ ವಿಸ್ತರಿಸಿದೆ. ಅಸ್ಸಾಮೀ ಜನತೆಯ ಬೇಡಿಕೆಗಳನ್ನು ಪ್ರತಿಪಾದಿಸುವುದಾಗಿ ಹೇಳಿಕೊಳ್ಳುತ್ತಾ ಪ್ರತ್ಯೇಕತಾವಾದ ಬೋಧಿಸುತ್ತಿದೆ. ಸಂಕುಚಿತವಾದ ಹಾಗೂ ಭಯೋತ್ಪಾದಕತೆಯನ್ನು ಬಳಸುತ್ತಿದೆ. ಅಲ್ಪಸಂಖ್ಯಾತರಲ್ಲಿ ಇದು ಭಯ ಹುಟ್ಟಿಸಿದೆ. ಅಸ್ಸಾಂ ಸರ್ಕಾರ ಭಯೋತ್ಪಾದಕರನ್ನು ಸಂತುಷ್ಟಿಗೊಳಿಸುವ ನೀತಿ ಅನುಸರಿಸಿ ಅವರ ಈ ಚಟುವಟಿಕೆಗಳನ್ನು ತಡೆಯುವಲ್ಲಿ ಸಂಪೂರ್ಣ ವಿಫಲವಾಗಿದೆ. ಇದೊಂದು ಅಪಾಯಕಾರಿ ಸ್ಥಿತಿ ಉಂಟುಮಾಡಲಿದೆ. ವಿಭಿನ್ನ ಜನಾಂಗೀಯ ಹಾಗೂ ಭಾಷಾ ಗುಂಪುಗಳಿಂದ ಕೂಡಿದ ಅಸ್ಸಾಂ ಐಕ್ಯತೆಗೆ ಬೆದರಿಕೆಯೊಡ್ಡಿದೆ. ಯು.ಎಲ್.ಎಫ್.ಎ. ಸೃಷ್ಟಿಸಿದ ಸ್ಥಿತಿ ಎದುರಿಸಲು ಅಸ್ಸಾಂ ಸರಕಾರ ಕೇಂದ್ರಸರ್ಕಾರದ ಸಹಕಾರ ಪಡೆಯಬೇಕು. ಗಡಿಯಾಚೆ ಬರ್ಮಾದಲ್ಲಿ ಶಿಬಿರಗಳಲ್ಲಿ ಈ ತಂಡಗಳಿಗೆ ತರಬೇತಿ ನೀಡಲಾಗುತ್ತಿದೆ. ಸರಿಯಾದ ಸಮಯದಲ್ಲಿ ಕ್ರಮಕೈಗೊಳ್ಳದಿದ್ದರೆ ಯು.ಎಲ್.ಎಫ್.ಎ. ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದಂತಾಗಿ ರಾಷ್ಟ್ರೀಯ ಐಕ್ಯತೆಗೆ ಒಂದು ಗಂಭೀರ ಬೆದರಿಕೆ ಒಡ್ಡುತ್ತದೆ ಎಂದು ಪಿ.ಬಿ. ಎಚ್ಚರಿಸಿದೆ.

ಕೋಮುಸ್ಥಿತಿ ಉಲ್ಬಣ

ಕಳೆದ ಒಂದು ತಿಂಗಳಲ್ಲಿ ಕೋಮು ದಂಗೆಗಳು ಆತಂಕಕಾರಿ ರೀತಿಯಲ್ಲಿ ಹೆಚ್ಚಿವೆ. ಗುಜರಾತ್‌ನ ಅಹ್ಮದಾಬಾದ್, ಬರೋಡಗಳಲ್ಲಿ ಹಲವಾರು ಜೀವಹಾನಿಯಾಗಿದೆ. ಕಾನಪುರ, ಮಥುರಾಗಳಲ್ಲಿ ಕೋಮು ಘರ್ಷಣೆಗಳು ನಡೆದಿವೆ. ಇದು ಬಾಬ್ರಿಮಸೀದಿಯ ಜಾಗದಲ್ಲಿ ದೇವಸ್ಥಾನ ಕಟ್ಟುವ ವಿಶ್ವಹಿಂದೂ ಪರಿಷತ್‌ನ ಚಳುವಳಿಯ ಹೊಸ ಘಟ್ಟದ ನೇರ ಫಲ ಎಂದು ಪಿ.ಬಿ. ಹೇಳಿದೆ. ಉತ್ತರ ಪ್ರದೇಶದಲ್ಲಿ ಭಜರಂಗ್‌ದಲ್‌ನಂತಹ ಸಂಘಟನೆಗಳು ಆರ್.ಎಸ್.ಎಸ್.ನ ಬೆಂಬಲದೊಂದಿಗೆ ಕೋಮು ದಂಗೆಕೋರತನಕ್ಕೆ ಇಳಿದಿವೆ. ಎರಡೂ ಕೋಮುಗಳ ಸಮಾಜ ಘಾತುಕ ಶಕ್ತಿಗಳು ಕೋಮು ಸಂಘಟನೆಗಳ ಹೆಸರಿನಲ್ಲಿ ಉನ್ಮಾದ ಎಬ್ಬಿಸಲು ಪ್ರಯತ್ನಿಸುತ್ತಿವೆ. ಈ ಶಕ್ತಿಗಳನ್ನು ಬಯಲಿಗೆಳೆಯಲು ತಕ್ಷಣ [illegible]ಂದು ದೇಶವ್ಯಾಪಿ ಪ್ರಕ್ಷೋಭೆ ನಡೆಸಬೇಕೆಂದು ಪಿ.ಬಿ. ನಿರ್ಣಯಿಸಿದೆ. ಮೇ ತಿಂಗಳಲ್ಲೇ ಈ ಕುರಿತು ಒಂದು ಪರಿಣಾಮಕಾರಿ ಪ್ರಕ್ಷೋಭೆಯನ್ನು ಆರಂಭಿಸಲು ಎಡ ಮತ್ತು ಜಾತ್ಯತೀತ ಶಕ್ತಿಗಳನ್ನು ಒಟ್ಟಿಗೆ ತರಬೇಕೆಂದು ಅದು ಹೇಳಿದೆ. ಮೇ ತಿಂಗಳಿಂದ ಆರಂಭಿಸಿ ಸಾರ್ವಜನಿಕ ಸಭೆಗಳ ಮೂಲಕ ಒಂದು ಸಾಮೂಹಿಕ ಪ್ರಕ್ಷೋಭೆ ನಡೆಸಬೇಕೆಂಬ ಉತ್ತರಪ್ರದೇಶ ರಾಜ್ಯ ಸಮಿತಿಯ ನಿರ್ಣಯವನ್ನು ಪೊಲಿಟ್‌ಬ್ಯೂರೋ ಅನುಮೋದಿಸಿತು.

ಅನಿಷ್ಟಕಾರೀ ಸಂಘಟನೆಯ ದುಷ್ಟಪಿತೂರಿ

ಸಿ.ಪಿ.ಐ.(ಎಂ) ಮುಖಂಡರನ್ನು ಹತ್ಯೆ ನಡೆಸಿ ಪಶ್ಚಿಮಬಂಗಾಳದಲ್ಲಿ ಹಿಂಸಾಚಾರ ನಡೆಸಿದ ಆನಂದಮಾರ್ಗದ ಪಿತೂರಿಯನ್ನು ಪಿ.ಬಿ. ಖಂಡಿಸಿತು. ಪಾಕಿಸ್ತಾನದಿಂದ ಕಳ್ಳತನದಲ್ಲಿ ತಂದ ಶಸ್ತ್ರಾಸ್ತ್ರಗಳೊಂದಿಗೆ ಬಿ.ಎಸ್.ಎಫ್. ಕೈಗೆ ಸಿಕ್ಕಿಬಿದ್ದ ಇಬ್ಬರು ಆನಂದಮಾರ್ಗಿಗಳ ಬಂಧನ ಈ ಅನಿಷ್ಟಕಾರೀ ಸಂಘಟನೆಯ ದುಷ್ಟ ಯೋಜನೆಯನ್ನು ಬಯಲಿಗೆಳೆದಿದೆ. ಒಂದು ಧಾರ್ಮಿಕ ಸಂಘಟನೆ ಎಂದು ಹೇಳಿಕೊಳ್ಳುತ್ತಾ ಸಾರ್ವಜನಿಕರನ್ನು ವಂಚಿಸಲು, ತನ್ನ ಕ್ರಿಮಿನಲ್ ಚಟುವಟಿಕೆಗಳನ್ನು ಮುಂದುವರೆಸಲು ಪ್ರಯತ್ನಿಸುತ್ತಿರುವ ಈ ಸಂಘಟನೆಗೆ ಭಯೋತ್ಪಾದಕತೆಯ ಹಾಗೂ ಹಿಂಸಾಚಾರದ ಇತಿಹಾಸವೇ ಇದೆ. ಇದನ್ನು ಜನರೆದುರು ಬಯಲಿಗೆಳೆಯಬೇಕೆಂದು ಪಿ.ಬಿ.ಹೇಳಿದೆ. ಭಾರತದಲ್ಲಿ ಮತ್ತು ಹೊರಗಡೆ ಈ ಸಂಘಟನೆಯ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ನಮ್ಮ ದೇಶದ ಪ್ರಜಾಪ್ರಭುತ್ವ ರಚನೆಗೆ ಹೊರತಾದ ಅದರ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳ ಬೇಕೆಂದು ಪಿ.ಬಿ. ಕೇಂದ್ರ ಸರ್ಕಾರಕ್ಕೆ ಕರೆ ನೀಡಿದೆ.

"ಪೀಪಲ್ಸ್‌ವಾರ್"-ಕಾಂಗ್ರೆ ಅನೈತಿಕ ಕೂಟ

ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ಸ್(ಐ) ಆಳ್ವಿಕೆಯಲ್ಲಿ ಸಾರ್ವತ್ರಿಕ ಕಾನೂನು ವ್ಯವಸ್ಥೆ ತೀವ್ರವಾಗಿ ಹದಗೆಟ್ಟಿದೆ. ಹರಿಜನ, ಗಿರಿಜನರ ಮೇಲೆ ಅತ್ಯಾಚಾರಗಳ ಸರಮಾಲೆಯೇ ಕಂಡು ಬಂದಿದೆ ಎಂದು ಗಮನಿಸಿದ ಪೊಲಿಟ್‌ಬ್ಯೂರೋ ಸಮಾಜ ಘಾತುಕ ಶಕ್ತಿಗಳು ನಿರ್ಭಿಡೆಯಿಂದ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಟೀಕಿಸಿದೆ.

'ಪೀಪಲ್ಸ್ ವಾರ್' ಗುಂಪನ್ನು ಸಂತುಷ್ಟಗೊಳಿಸುವ ರಾಜ್ಯ ಕಾಂಗ್ರೆಸ್(ಐ) ಧೋರಣೆಯಿಂದ, ರಿಯಾಯ್ತಿಗಳಿಂದ ಈ ಗುಂಪು ತನ್ನ ಹಲ್ಲೆಗಳನ್ನು ಹೆಚ್ಚಿಸಿದೆ. ಸಿ.ಪಿ.ಐ.(ಎಂ) ಅದರ ಹಲ್ಲೆಗಳ ಮುಖ್ಯಗುರಿ. ಚೆನ್ನಾರೆಡ್ಡಿ ಸರ್ಕಾರ ಹಾಗೂ ಪೀಪಲ್ಸ್‌ವಾರ್ ಗುಂಪಿನ ಅನೀತಿಯುತ ಕೂಟದಿಂದ ಧೈರ್ಯಪಡೆದು ಅವರು ಪ್ರಜಾಪ್ರಭುತ್ವ ಆಂದೋಲನವನ್ನು ಛಿದ್ರಗೊಳಿಸುವ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಈ ಗುಂಪಿನ ಪ್ರಜಾಪ್ರಭುತ್ವ ವಿರೋಧಿ, ಛಿದ್ರಕಾರಿ ಚಟುವಟಿಕೆಗಳನ್ನು ಬಹಿರಂಗಗೊಳಿಸುವ ಒಂದು ಸಾಮೂಹಿಕ ಪ್ರಕ್ಷೋಭೆ ಆರಂಭಿಸಲು ಸಿ.ಪಿ.ಐ.(ಎಂ) ಆಂಧ್ರಪ್ರದೇಶ ರಾಜ್ಯಸಮಿತಿ ನಿರ್ಧರಿಸಿದೆ. ಈ ನಕ್ಸಲೈಟ್ ಗುಂಪಿನ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧ ರಾಜ್ಯದ ಎಲ್ಲಾ ಪ್ರಜಾಪ್ರಭುತ್ವವಾದಿ ವಿಭಾಗಗಳು ಅಣಿ ನೆರೆಯಬೇಕೆಂದು ಪಿ.ಬಿ. ಕರೆ ನೀಡಿದೆ.

ತ್ರಿಪುರಾದಲ್ಲಿ ದಮನ ಮುಂದುವರಿಯುತ್ತಿದೆ.

ತ್ರಿಪುರಾದಲ್ಲಿ ಸಂವಿಧಾನ ನೀಡಿದ ಸಾಮಾನ್ಯ ಮೂಲಭೂತ ಹಕ್ಕುಗಳನ್ನು, ಪ್ರಜಾಪ್ರಭುತ್ವ ಹಕ್ಕುಗಳನ್ನು ಇನ್ನೂ ಮರು ಸ್ಥಾಪಿಸಲಾಗಿಲ್ಲ. ಸಿ.ಪಿ.ಐ.(ಎಂ) ವಿರುದ್ಧ ಕಾಂಗ್ರೆ ಟಿ.ಯು.ಜೆ.ಎಸ್. ಕೂಟ ಸರ್ಕಾರದ ದಮನಕಾರೀ ಹಲ್ಲೆ ಮುಂದುವರಿದಿದೆ. ಬಾಂಗ್ಲಾ ದೇಶ ವಿದೇಶೀಯರನ್ನು ಮತದಾರರನ್ನಾಗಿ ನೊಂದಾಯಿಸುವ ಕೆಲಸಕ್ಕೆ ವಿಶೇಷವಾಗಿ ಬುಡಕಟ್ಟು ಸ್ವಾಯತ್ತ ಜಿಲ್ಲಾ ಮಂಡಳಿ ಪ್ರದೇಶಗಳಲ್ಲಿ ಕಾಂಗ್ರೆಸ್(ಐ) ಮತ್ತು ರಾಜ್ಯ ಸರ್ಕಾರ ಪ್ರೋತ್ಸಾಹ ನೀಡುತ್ತಿವೆ. ಇನ್ನು ಈ ಕೂಟ ಸರ್ಕಾರ ಸ್ವಾಯತ್ತ ಜಿಲ್ಲಾ ಮಂಡಳಿಗಳ ಕಾರ್ಯನಿರ್ವಹಣೆಯನ್ನು ತಡೆಗಟ್ಟಿದೆ. ಜುಲೈ ೧೯೯೦ ರಲ್ಲಿ ಈ ಮಂಡಳಿಗಳಿಗೆ ನಡೆಯಲಿರುವ ಚುನಾವಣೆಗಳ ಹಿನ್ನೆಲೆಯಲ್ಲಿ ಬುಡಕಟ್ಟು ಪ್ರದೇಶಗಳಲ್ಲಿ ಹೊಸ ಹಲ್ಲೆಗಳನ್ನು ಹರಿಯಬಿಟ್ಟಿದೆ. ಈ ಎಲ್ಲಾ ಛಿದ್ರಕಾರಿ ಚಟುವಟಿಕೆಗಳನ್ನು ಎದುರಿಸಿ ಮುಂಬರುವ ಈ ಚುನಾವಣೆಗಳಲ್ಲಿ ಕಾಂಗ್ರೆಸ್ಸ್(ಐ) ಟಿ.ಯು.ಜೆ.ಎಸ್. ಕೂಟವನ್ನು ಸೋಲಿಸಲು ಜನರನ್ನು ಅಣಿನೆರೆಸುವಲ್ಲಿ ಪಕ್ಷ ಮತ್ತು ಅದರ ಮಿತ್ರರಿಗೆ ಸಾಧ್ಯವಾಗುತ್ತದೆ ಎಂಬ ವಿಶ್ವಾಸವನ್ನು ಪಿ.ಬಿ. ವ್ಯಕ್ತಪಡಿಸಿದೆ.

ಆರ್ಥಿಕಸನ್ನಿವೇಶ ಹದಗೆಟ್ಟಿದೆ

ದೇಶದ ಆರ್ಥಿಕ ಸ್ಥಿತಿಯನ್ನು ಪರಾಮರ್ಶಿಸಿದ ಪಿ.ಬಿ. ಬೆಲೆಯೇರಿಕೆ ತಡೆಯಲು ತಕ್ಷಣ ಕ್ರಮ ಅಗತ್ಯವೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ ಬಗ್ಗೆ ಇತರ ಎಡಪಕ್ಷಗಳೊಂದಿಗೆ ದೇಶವ್ಯಾಪಿ ಪ್ರಕ್ಷೋಭೆ ನಡೆಸಲು ಅದು ನಿರ್ಧರಿಸಿದೆ (ಐಕ್ಯರಂಗ'ದ ಹಿಂದಿನ ಸಂಚಿಕೆಯ ಮುಖಪುಟ ನೋಡಿ)

ಪ್ರಮುಖ ಉದ್ದಿಮೆ ವಲಯದಲ್ಲಿ ಖಾಸಗಿಯವರಿಗೆ ಇನ್ನಷ್ಟು ಅವಕಾಶ ಒದಗಿಸುವ ರಾಷ್ಟ್ರೀಯ ರಂಗ ಸರ್ಕಾರದ ಇತ್ತೀಚಿನ ವಿವಿಧ ನೀತಿ ಘೋಷಣೆ ಸಾರ್ವಜನಿಕ ವಲಯಕ್ಕೆ ಹಾನಿಕಾರಕ ಎಂದು ಗಮನಿಸಿರುವ ಪೊಲಿಟ್‌ಬ್ಯೂರೋ ಹಿಂದಿನ ರಾಜೀವಗಾಂಧಿ ಸರ್ಕಾರದ ಖಾಸಗೀಕರಣದ ಭರ [illegible] ಉದಾರೀಕರಣ ನೀತಿ ಬದಲಾಗಿಲ್ಲವೆಂಬುದು ಈ ನಿಲುವಿನಿಂದ [illegible] ಸಂಗತಿ ಎಂದು ಪಿ.ಬಿ. ಟೀಕಿಸಿದೆ.

ಮತ್ತೆ ಈ [illegible] ಅಮೆರಿಕನ್ ಆಡಳಿತಭಾರತದ ವಿರುದ್ಧ ಸೂಪರ್ ೩೦೧ ಕಲಮನ್ನು [illegible] ಬೆದರಿಕೆ ಹಾಕಿರುವುದನ್ನು ಬಲವಾಗಿ ಖಂಡಿಸಿರುವ ಪಿ.ಬಿ. [illegible] ಆರ್ಥಿಕ ಸ್ಥಿತಿಯನ್ನು ಬಳಸಿಕೊಂಡು ಅಮೆರಿಕನ್ ಸರ್ಕಾರ, ಭಾರತ ತನ್ನ ಆರ್ಥಿಕವನ್ನು ಅಮೇರಿಕನ್ [illegible]ರಾಷ್ಟ್ರೀಯ ಕಂಪನಿಗಳಿಗೆ ಮತ್ತಷ್ಟು ದೊಡ್ಡದಾಗಿ ತೆರೆಯುವಂತೆ [illegible] ಹಾಕುತ್ತಿದೆ ಎಂದಿದೆ.

ಈ [illegible] ಕ್ರಮಗಳನ್ನು ವಿರೋಧಿಸುವ ದೇಶದ [illegible] ಹಿತಾಸಕ್ತಿಗಳನ್ನು ಕಾಪಾಡುವ [illegible] ಸರಕಾರದ ನಿಲುವಿಗ ತನ್ನ ಬೆಂಬಲ ಸೂಚಿಸಿರುವ ಪಿ.ಬಿ. ಇತರ ಎಲ್ಲಾ ದೇಶಪ್ರೇಮಿ ಶಕ್ತಿಗಳೂ ಈ ಅಮೆರಿಕನ್ ಬ್ಲಾಕ್‌ಮೇಲನ್ನು ಎದುರಿಸುವಲ್ಲಿ ಸರ್ಕಾರ ದೃಢ ನಿಲುವು ತಳೆಯುವಲ್ಲಿ ಬೆಂಬಲ ನೀಡಬೇಕೆಂದು ಹೇಳಿದೆ.

ಸಮಾಜವಾದಿ ದೇಶಗಳಲ್ಲಿ

ಸಮಾಜವಾದಿ ದೇಶಗಳಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ವಿಶೇಷವಾಗಿ ಪೂರ್ವ ಯುರೋಪಿನಲ್ಲಿ ಸಮಾಜವಾದಕ್ಕಾದ ಹಿನ್ನಡೆ, ಸೋವಿಯೆತ್ ಒಕ್ಕೂಟದ ಬೆಳವಣಿಗೆಗಳ ಬಗ್ಗೆ ಪೊಲಿಟ್‌ಬ್ಯೂರೋ ಆಳವಾದ ಚರ್ಚೆ ನಡೆಸಿ ಒಂದು ಕರಡು ದಸ್ತಾವೇಜನ್ನು ಅಂತಿಮಗೊಳಿಸಿತು. ಇದನ್ನು ಮೇ ತಿಂಗಳ ಕೊನೆಯ ವಾರದಲ್ಲಿ ನಡೆಯಲಿರುವ ಸಭೆಯಲ್ಲಿ ಕೇಂದ್ರ ಸಮಿತಿಯ ಮುಂದೆ ಮಂಡಿಸಲಾಗುವುದು.

ಹೋ ಚಿ ಮಿನ್ಹ್ ಜನ್ಮ ಶತಾಬ್ಧಿ

ವಿಯೆಟ್ನಾಂ ಕ್ರಾಂತಿಯ ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಸುವಿಖ್ಯಾತ ಮುಂದಾಳು ಹೊಚಿ ಮಿನ್ಹನವರ ಜನ್ಮ ಶತಮಾನೋತ್ಸವವನ್ನು ಮೇ ೧೯ ರಿಂದ ವಿಶ್ವಾದ್ಯಂತ ಆಚರಿಸುತ್ತಿರುವ ಸಂದರ್ಭದಲ್ಲಿ ಅವರ ನೆನಪಿನಲ್ಲಿ ಒಂದು ನಿರ್ಣಯವನ್ನು ಪಿ.ಬಿ. ಅಂಗೀಕರಿಸಿತು. ಜನ್ಮ ಶತಾಬ್ಧಿಯನ್ನು ಅತ್ಯಂತ ಯೋಗ್ಯ ರೀತಿಯಲ್ಲಿ ಆಚರಿಸಿ ಎಲ್ಲಾ ಪ್ರಗತಿಪರ, ಪ್ರಜಾಪ್ರಭುತ್ವ ವಿಭಾಗಗಳಲ್ಲಿ ಹೊ ಚಿ ಮಿನ್ಹರವರ ಕ್ರಾಂತಿಕಾರೀ ಜೀವನ ಹಾಗೂ ಉದಾಹರಣೆಯನ್ನು ಪ್ರತಿಪಾದಿಸಬೇಕು, ಅಳವಡಿಸಿಕೊಳ್ಳಬೇಕು ಎಂದು ಪಕ್ಷದ ಎಲ್ಲಾ ಘಟಕಗಳಿಗೆ, ಕಾರ್ಯಕರ್ತರಿಗೆ ಪೊಲಿಟ್‌ಬ್ಯೂರೋ ಕರೆ ನೀಡಿದೆ.

ದ.ಆಫ್ರಿಕಾ ಮಾತುಕತೆ ಪ್ರಗತಿ

ದ. ಆಫ್ರಿಕಾ ಸರ್ಕಾರ ಮತ್ತು ANCಯ ನಡುವೆ ಮಾತುಕತೆ ಆರಂಭವಾಗಿದ್ದು ಒಳ್ಳೆಯ ಪ್ರಗತಿ ಕಂಡುಬಂದಿದೆ. ಮೊದಲ ಹಂತದಲ್ಲಿ ಸುಮಾರು ೩೦೦೦ ರಾಜಕೀಯ ಕೈದಿಗಳ ಬಿಡುಗಡೆಯ ವಿವರಗಳನ್ನು ಸಿದ್ಧಪಡಿಸಲು ಜಂಟಿ ಸಮಿತಿ ರಚಿಸಿದೆ. ವರ್ಣಭೇದ ವ್ಯವಸ್ಥೆಯನ್ನು ಕಿತ್ತೆಸೆಯದೆ ANC ತನ್ನ ಸಶಸ್ತ್ರ ಹೋರಾಟವನ್ನು ಬಿಟ್ಟುಕೊಡುವುದಿಲ್ಲ ಎಂಬ ನಿಲುವನ್ನು ಸ್ವಲ್ಪವೂ ಸಡಿಲಿಸಿಲ್ಲ. ಮಾತುಕತೆ ಮೊದಲು ಜೂಲು ಜನಾಂಗದ ಮತ್ತು ಇತರ ಕರಿಯರ ನಡುವೆ ತಿಕ್ಕಾಟ ಹಿಂಸಾಚಾರ ಪ್ರಚೋದಿಸಿ ಸಮಸ್ಯೆ ಸೃಷ್ಟಿಸಲು ಪ್ರಯತ್ನಿಸಿದ ಸರ್ಕಾರದ ಕ್ರಮಗಳಿಗೆ ಯಾವುದೇ ಯಶಸ್ಸು ದೊರಕಿಲ್ಲ. ಮೊದಲ ಹಂತದ ಮಾತುಕತೆಗಳಲ್ಲಿ ಹಿಂಸೆಗೆ ಪ್ರಚೋದನೆ ತಡೆಯಲು ಐದು ಕ್ರಮಗಳ ಬಗ್ಗೆ ಸಹ ಚರ್ಚೆ ನಡೆಯುತ್ತಿದೆ. ದ. ಆಫ್ರಿಕಾ ಸರ್ಕಾರದ ಬೆಂಬಲಿಗ ಜೂಲು ನಾಯಕ ಬುತೆಲಿಜಿ ಸಹ ಮಾತುಕತೆಯನ್ನು ಸ್ವಾಗತಿಸಬೇಕಾಗಿ ಬಂದಿದೆ.

ಕ್ಯೂಬಾದ ಸುತ್ತಮುತ್ತ ಸಮರಾಭ್ಯಾಸ

ಅಮೇರಿಕ ಸಮಾಜವಾದಿ ದೇಶಗಳ ಮೇಲೆ ಆಕ್ರಮಣ ಅಪಪ್ರಚಾರ, ಅಂತರಿಕ ಬುಡಮೇಲು ಕೃತ್ಯಗಳನ್ನು ಮುಂದುವರಿಸಿದೆ. ಕ್ಯೂಬಾ ದ್ವೀಪದ ಸುತ್ತಮುತ್ತಲಿನ ಸಾಗರದಲ್ಲಿ ಮೇ ಮೊದಲ ಎರಡು ವಾರಗಳಲ್ಲಿ ಮೂರು ಪ್ರಮುಖ ಸಮರಾಭ್ಯಾಸಗಳನ್ನು ನಡೆಸಿದೆ. ಇದು ಕ್ಯೂಬಾದ ಮೇಲೆ ಹಠಾತ್ತನೆ ಆಕ್ರಮಣ ಮಾಡಲು ತಯಾರಿ. ಆದರೆ ಕ್ಯೂಬಾದ ಸೈನ್ಯ ಮತ್ತು ಜನತೆ ಇಂತಹ ಯಾವುದೇ ದುಸ್ಸಾಹಸಕಾರಿ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸಿದ್ಧವಿದೆ ಎಂದು ಕಾಸ್ಟ್ರೋ ಹೇಳಿದ್ದಾರೆ. ಇದು ಅವರ ಮೇ ದಿನದ ಭಾಷಣದ ಮುಖ್ಯ ವಿಷಯವಾಗಿತ್ತು.

ಈ ವಾರ...

★ ಭಾರತವು ಸಾರ್ವಭೌಮ ರಾಷ್ಟ್ರವೆಂಬ ಅಂಶವನ್ನು ಅಮೆರಿಕಾ ಮರೆತಂತೆ ನಡೆದುಕೊಳ್ಳುತ್ತಿರುವುದು ವಿಷಾದನೀಯ

-- ಸಂಯುಕ್ತ ಕರ್ನಾಟಕ, ಮೇ ೪

★ ನಾಲ್ಕು ದಶಕಗಳ ಯೋಜಿತ ಅಭಿವೃದ್ಧಿಯ ನಂತರವೂ ಮಹಿಳಾ ಸಾಕ್ಷರತೆ, ಕುಟುಂಬ ಯೋಜನೆ ಹಾಗೂ ಕುಟುಂಬ ಆರೋಗ್ಯದ ನಡುವೆ ಗರಿಷ್ಠ ಸಂಬಂಧವಿದೆಯೆಂಬುದನ್ನು ನಿರ್ಲಕ್ಷಿಸಲಾಗಿದೆ. ೧೯೬೫ ಹಾಗೂ ೧೯೮೬ರ ನಡುವೆ ಸೆಕೆಂಡರಿ ಶಾಲೆಗೆ ಹೋಗುವ ಹೆಣ್ಣುಮಕ್ಕಳ ಶೇಕಡಾ ೧೩ ರಿಂದ ೨೪ ಕ್ಕೇರಿತು. ಇದೇ ಅವಧಿಯಲ್ಲಿ ಇತರ ಅಭಿವೃದ್ಧಿಶೀಲ ದೇಶಗಳಾದ ಶ್ರೀಲಂಕಾದಲ್ಲಿ ೩.೫ ರಿಂದ ೭೦ಕ್ಕೆ, ಕೊಲಂಬಿಯಾದಲ್ಲಿ ೧೬ ರಿಂದ ೫೬ಕ್ಕೆ, ಮಾರಿಷಸ್‌ನಲ್ಲಿ ೧೮ ರಿಂದ ೪೯ ಶೇಕಡಾಕ್ಕೆ ಏರಿತು.

-- ಇಕನಾಮಿಕ್ ಟೈಮ್ಸ್, ಮೇ ೧೬

★ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆ ಬಸ್‌ಪ್ರಯಾಣ ದರಗಳನ್ನು ಏರಿಸಿದೆ ಎನ್ನುವುದಕ್ಕಿಂತ ಪ್ರಯಾಣಿಕರ ಸುಲಿಗೆ ಪ್ರಾರಂಭಿಸಿದೆ ಎನ್ನುವುದು ಹೆಚ್ಚುಸೂಕ್ತ.

-- ಸಂಯುಕ್ತ ಕರ್ನಾಟಕ, ಮೇ ೮

★ ದರಗಳ ಏರಿಕೆಯಾಗಬೇಕು ಅನ್ನಿಸಿದಾಗ ಯಾರೋ ಕೆಲವು ಅಧಿಕಾರಿಗಳು ಅಂಕಿ ಅಂಶಗಳನ್ನು ಸಿದ್ಧಪಡಿಸುತ್ತಾರೆ. ದರಗಳ ವಿಮರ್ಶೆಆಗುತ್ತದೆ. ಆರ್ಥಿಕ ಹೊರೆ ಯಾವ ಜನಾಂಗದ ಮೇಲೆ ಬೀಳುತ್ತದೆ? ಆ ವರ್ಗಗಳಿಗೆ ಅದನ್ನು ಸಹಿಸುವ ಶಕ್ತಿಯಿದೆಯೇ? ಎನ್ನುವ ಪ್ರಶ್ನೆಗಳೆಲ್ಲ ಈ ನೌಕರಶಾಹಿಯ ಗಮನಕ್ಕೆ ಬರುವುದೇ ಇಲ್ಲ.

-- ಕನ್ನಡ ಪ್ರಭ, ಮೇ ೯

★ ಕಳೆದ ಸೋಮವಾರ ಅಯೋಧ್ಯೆಯಲ್ಲಿ ಯೋಜಿಸಿದ್ದ ಶಿಲಾನ್ಯಾಸವನ್ನು ತಡೆಯುವಲ್ಲಿ ಪೂರ್ಣ ಯಶಸ್ಸಾಗಿದೆ ಎಂದು ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳು ನ್ಯಾಯಯುತವಾಗಿಯೇ ಹೇಳಿಕೊಳ್ಳಬಹುದು. ಆದರೆ ಹೆಚ್ಚಿನ ಮಹತ್ವದ ಪ್ರಶ್ನೆಯೆಂದರೆ ವಿ.ಹೆಚ್.ಪಿ. ಮತ್ತು ಬಿ.ಜೆ.ಪಿ. ಮೇಲೆ ಅವರ ಕ್ರಮಗಳ ಪ್ರಭಾವ ಅವು ಶಂಕರಾಚಾರ್ಯರ ಬಂಧನವನ್ನು ಬೆಂಬಲಿಸಬೇಕಾಗಿ ಬಂತು.

-- ಟೈಂಸ್ ಆಫ್ ಇಂಡಿಯಾ, ಮೇ ೯

★ ಉತ್ತರ ಪ್ರದೇಶ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ........ ಬಾಬ್ರಿ ಕಾರ್ಯಾಚರಣೆ ಸಮಿತಿ ಇದುವರೆಗೆ ತರ್ಕ ಸಂಗತಿ ನಿಲುವು ತಳೆದಿದೆ. ಕಾನೂನು ಇತ್ಯರ್ಥಕ್ಕೆ ಅದು ಸಿದ್ಧವಾಗಿದೆ. ಆದರೆ ವಿ.ಹೆಚ್.ಪಿ. ಇಂತಹದ್ದೇನನ್ನೂ ತೋರ್ಪಡಿಸಿಲ್ಲ.

-- ಡೆಕ್ಕನ್ ಹೆರಾಲ್ಡ್, ಮೇ ೯

★ ಉತ್ತರ ಪ್ರದೇಶ ಸರ್ಕಾರ ಒಂದು ರೀತಿಯಲ್ಲಿ ಅಸಾಧಾರಣ ಧೈರ್ಯವನ್ನು ಪ್ರಕಟಿಸಿತ್ತು. ದ್ವಾರಕಾಪೀಠದ ಸ್ವಾಮಿಗಳ ಬಂಧನದ ನಂತರವೂ ಸರ್ಕಾರ ಸಾಕಷ್ಟು ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಂಡಿದ್ದರಿಂದಾಗಿ ಮೇ ೭ರ ಶಿಲಾನ್ಯಾಸ ಕಾರ್ಯಕ್ರಮ ವಿಫಲಗೊಂಡದ್ದರಿಂದ ದೊಡ್ಡ ಗಂಡಾತರ ಕಳೆಯಿತೆನ್ನುವ ನಿಟ್ಟುಸಿರು ಬಿಡುವಂತಾಗಿದೆ.

-- ಪ್ರಜಾವಾಣಿ, ಮೇ ೯

Printed and published by P.Ramachandra Rao on behalf of Communist party of India (Marxist), Karnataka State Committee I-56, K.V.Temple Street, Sultanpet, Bangalore 560 053, Phone No. 7533[illegible] Editor: [illegible]